ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 ಸಂಚಿಕೆ 26 ಜೂನ್ 29, 1980 ಬೆಲೆ : 50 ಪೈಸೆ

ಸರಕಾರ ಕಣ್ಣು ತೆರೆಯುವುದೇ?

ಸಂಪಾದಕೀಯ

ಕಾರ್ಮಿಕ ಕ್ಷೇತ್ರದಲ್ಲಿ ಕರ್ನಾಟಕ ರಾಜ್ಯಾದ್ಯಂತ ಪರಿಸ್ಥಿತಿಯು ತೀರಾ ಹದಗೆಟ್ಟಿದೆ. ಆಡಳಿತ ಯಂತ್ರವು ಸಂಪೂರ್ಣವಾಗಿ ಮಾಲೀಕರ ಗುಲಾಮನಂತೆ ವರ್ತಿಸುತ್ತಿದ್ದು ಕಾರ್ಮಿಕರನ್ನು ಯಾರೂ ಕೇಳುವವರೇ ಇಲ್ಲವೆಂಬ ಪರಿಸ್ಥಿತಿ ಬಂದಿದೆ.

ಬೆಂಗಳೂರಿನಲ್ಲಿ 2,200 ಐ. ಟಿ ಸಿ. ಕಾರ್ಮಿಕರು ಮುಷ್ಕರ ಹೂಡಿ ಇಂದಿಗೆ ನೂರುದಿನಗಳ ಮೇಲಾಯಿತು. ಮಾಲೀಕರು ತಮ್ಮ ಕೈಗೊಂಬೆಗಳೊಂದಿಗೆ ಮಾಡಿಕೊಂಡ ಕಾರ್ಮಿಕವಿರೋಧಿ ಒಪ್ಪಂದದ ವಿರುದ್ಧ ಈ ಹೋರಾಟ ನಡೆದಿದೆ. ಹೋರಾಟವನ್ನು ಮುರಿಯಲು ಪೋಲೀಸರು ಕಾರ್ಮಿಕರ ಮನೆಮನೆಗೆ ಹೋಗಿ ಹೆದರಿಸುತ್ತಿರುವರೆಂದು ವರದಿ ಇದೆ. ಎಫ್. ಎಂ. ಖಾನ್, ವೆಂಕಟೇಶ್ ಮುಂತಾದ ಐ. ಎನ್. ಟಿ. ಯು. ಸಿ. ನಾಯಕರ ಮುಷ್ಕರ ಮುರಿಯುವ ಎಲ್ಲ ಪ್ರಯತ್ನಗಳೂ ವಿಫಲಗೊಂಡಿವೆ. ಸರಕಾರ ಮುಷ್ಕರವನ್ನು ನ್ಯಾಯ.ಬಾಹಿರವೆಂದು ಸಾರಿದೆ. ಕಾರ್ಮಿಕ ಮುಖಂಡರ ಮೇಲೆ ಅನೇಕ ಕೇಸುಗಳನ್ನು ಹಾಕಿ ಕಾರ್ಮಿಕರನ್ನು ಹೆದರಿಸಲು ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿದ್ದರೂ ಇಷ್ಟರವರೆಗೆ 2,200 ಕಾರ್ಮಿಕರಲ್ಲಿ 20 ಜನರೂ ಕೆಲಸಕ್ಕೆ ಹೋಗುತ್ತಿಲ್ಲವೆಂದು ತಿಳಿದರೂ ಸರಕಾರ ಇದನ್ನು ಬಗೆಹರಿಸಲು ಯೋಗ್ಯಕ್ರಮ ತೆಗೆದುಕೊಳ್ಳದಿರುವುದು ಖಂಡನೀಯವಾಗಿದೆ.

ಬೆಳಗಾಂನ ಹಿಂಡೋಲಿಯ ಕಾರ್ಖಾನೆಯಲ್ಲೂ, ಬಾಗಲ್‌ಕೋಟೆಯ ಕಾಟನ್ ಸ್ಪಿನ್ನಿಂಗ್ ಮಿ.ಲ್‌ನಲ್ಲೂ, ಅಮ್ಮಸಂದ್ರ ಸಿಮೆಂಟ್ ಕಾರ್ಖಾನೆಯಲ್ಲೂ, ಮಂಡ್ಯದ ಅಸಿಟೇಟ್ ಉದ್ಯಮದಲ್ಲೂ, ಬೆಂಗಳೂರಿನ ಮೆಟಲ್ ಲ್ಯಾಂಪ್ಸ್ ಫ್ಯಾಕ್ಟರಿಯಲ್ಲೂ ಹೋರಾಟಗಳು ನಡೆಯುತ್ತಿವೆ. ಪವರ್ ಲೂಂ ಫ್ಯಾಕ್ಟರಿಗಳ ಸಹಸ್ರಾರು ಕಾರ್ಮಿಕರು ಸರಕಾರವೇ ನಿಗದಿಮಾಡಿದ ಕೂಲಿ ಜಾರಿಯಾಗಬೇಕೆಂದೂ ಹೋರಾಡುತ್ತಿದ್ದಾರೆ. ಈ ಹೋರಾಟಗಳು ದೀರ್ಘಕಾಲದಿಂದ ನಡೆಯುತ್ತಿದ್ದರೂ ಸರಕಾರ ಕುಂಭಕರ್ಣ ನಿದ್ರೆಯಲ್ಲಿದ್ದಂತೆ ವರ್ತಿಸುತ್ತಿದೆ.

ರಾಜ್ಯದ ಸಂಘಟಿತ ಕಾರ್ಮಿಕವರ್ಗ ಈ ಶೋಚನೀಯ ಪರಿಸ್ಥಿತಿಯನ್ನು ಕೊನೆಗಾಣಿಸಬೇಕು. ಸರಕಾರವು ಕಾರ್ಮಿಕರ ನ್ಯಾಯವಾದ ಬೇಡಿಕೆಗಳನ್ನು ಈಡೇರಿಸುವಂತೆ ತೀವ್ರ ಒತ್ತಾಯಪಡಿಸಬೇಕು. ಕಾರ್ಮಿಕರ ಹೋರಾಟ ಯಶಸ್ವಿಯಾಗಲೆಂದು ಹಾರೈಸುತ್ತೇವೆ. ●

ಛಿದ್ರಕಾರಿ ಶಕ್ತಿಗಳ ವಿರುದ್ಧ ಜನತೆಯನ್ನು ಒಗ್ಗೂಡಿಸಲು ಕರೆ

ಎಡರಂಗ ಸರಕಾರವು ಆಡಳಿತೆ ನಡೆಸುತ್ತಿರುವ ತ್ರಿಪುರಾ ರಾಜ್ಯದಲ್ಲಿ ಛಿದ್ರಕಾರಿ ಪ್ರತಿಗಾಮಿ ಶಕ್ತಿಗಳು ಹೆಚ್ಚುಹೆಚ್ಚಾಗಿ ಜನಪ್ರಿಯತೆಯನ್ನು ಗಳಿಸುತ್ತಿರುವ ಎಡರಂಗ ಸರಕಾರದ ವಿರುದ್ಧ ನಡೆಸುತ್ತಲಿದ್ದ ಪಿತೂರಿಯ ಬಗ್ಗೆ ಆಗಿಂದಾಗ್ಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಎಚ್ಚರಿಕೆಯನ್ನಿತ್ತಿದೆ, ಗುಡ್ಡಗಾಡು ಜನರ ಉಪಜಾತಿ ಸಮಿತಿಯ ತೀವ್ರಗಾಮಿ ಮುಖಂಡತ್ವ ಮತ್ತು ಅಮ್ರಬಂಗಾಲಿ ಹಾಗೂ ಆನಂದಮಾರ್ಗದಂತಹ ಸಂಘಟನೆಗಳು ಜನತೆಯ ಐಕ್ಯತೆಯನ್ನು ವಿಭಜಿಸಲು ನಡೆಸಿದ ತಂತ್ರಗಳು ಜನವಿದಿತವಾಗಿದೆ. ಈ ಎಲ್ಲಾ ಛಿದ್ರಕಾರಿ ಚಟುವಟಿಕೆಗಳಿಗೆ ವಿದೇಶಿ ಶಕ್ತಿಗಳ ಸಹಾಯ ದೊರೆಯುತ್ತಲಿರುವುದೂ ಖಚಿತವಾಗಿದೆ; ಅಸ್ಸಾಮಿನ ಚಳವಳವು ಈ ಛಿದ್ರಕಾರಿ ಶಕ್ತಿಗಳಿಗೆ ಹೊಸ ಉತ್ತೇಜನ ನೀಡಿದೆ.

ತ್ರಿಪುರಾದಲ್ಲೂ, ದೇಶದ ಈಶಾನ್ಯ ಭಾಗದಲ್ಲೂ ನಡೆಯುತ್ತಲಿರುವ ಪ್ರತ್ಯೇಕತಾ ಚಳುವಳಿ ಮತ್ತು ಛಿದ್ರಕಾರಿ ಶಕ್ತಿಗಳು ರಾಷ್ಟ್ರೀಯ ಸಮಗ್ರತೆಗೆ ತಂದೊಡ್ಡಿರುವ ಅಪಾಯ, ಹಾಗೆಯೇ ಜನಪ್ರಿಯತೆಯನ್ನು ಹೆಚ್ಚಿಸಿಕೊಳ್ಳುತ್ತಲಿರುವ ಎಡರಂಗ ಸರಕಾರದ ವಿರುದ್ಧ ನಡೆಸುವ ಪಿತೂರಿಗಳ ಬಗ್ಗೆ ರಾಷ್ಟ್ರದಾದ್ಯಂತ ಜನತೆ ಎಚ್ಚರಿಕೆ ಈಯಬೇಕಾಗಿದೆ. ಆರ್.ಎಸ್.ಎಸ್. ನಂತಹ ಸಂಘಟನೆಗಳು ಈ ಚಳುವಳಿಗಳನ್ನು ರಾಷ್ಟ್ರೀಯ ಚಳುವಳಿ ಎಂದು ಬಣ್ಣಿಸುವುದರ ಹಿನ್ನೆಲೆಯನ್ನು ಜನತೆಗೆ ತಿಳಿಸಬೇಕಾಗಿದೆ. ಎಲ್ಲಾ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಒಂದುಸೇರಿಸಿ ತ್ರಿಪುರಾ ಎಡರಂಗ ಸರಕಾರಕ್ಕೆ ಸಂಪೂರ್ಣ ಬೆಂಬಲ ಕೊಡುವುದು ಆದ್ಯ ಕರ್ತವ್ಯವಾಗಿದೆ. ಹಾಗೆಯೇ ತ್ರಿಪುರಾದಲ್ಲಿನ ಪರಿಹಾರ ಕಾರ್ಯಕ್ಕಾಗಿ ತುರ್ತಾಗಿ ಸಹಾಯವನ್ನು ಕಳುಹಿಸಬೇಕಾಗಿದೆ,

ರಾಷ್ಟ್ರೀಯ ಸಮಗ್ರತೆಗೆ ಬಂದೊದಗಿರುವ ಅಪಾಯವನ್ನು ಜನತೆಗೆ ಹೇಳಿ, ಎಡ ಪ್ರಜಾಪ್ರಭುತ್ವ ಶಕ್ತಿಗಳನ್ನು ಒಂದುಗೂಡಿಸಿ ತ್ರಿಪುರಾದ ಎಡರಂಗ ಸರಕಾರಕ್ಕೆ ಬೆಂಬಲ ನೀಡಲು ಸಹಾಯವಾಗುವುದಕ್ಕಾಗಿ ಜುಲೈ ಮೊದಲ ವಾರದಲ್ಲಿ ಎಲ್ಲಾ ಕಡೆಗಳಲ್ಲೂ ಕರಪತ್ರಗಳನ್ನು ಹಚ್ಚುವುದು, ಭಿತ್ತಿ ಪತ್ರಗಳನ್ನು ಅಂಟಿಸುವುದು, ಹಾಲ್ ಮೀಟಿಂಗು ಮತ್ತು ಸಾರ್ವಜನಿಕ ಸಭೆ ನಡೆಸಿ ಜನತೆಗೆ ತಿಳುವಳಿಕೆ ನೀಡುವುದು – ಇವೇ ಕಾರ್ಯಕ್ರಮಗಳನ್ನು ನಡೆಸಲು ಸಿ.ಪಿ.ಐ.(ಎಂ) ರಾಜ್ಯ ಸಮಿತಿ ಸೆಕ್ರೆಟಾರಿಯಟ್ ತನ್ನ ಎಲ್ಲಾ ಘಟಕಗಳಿಗೆ ಮತ್ತು ಸಾಮೂಹಿಕ ಸಂಘಟನೆಗಳಿಗೆ ಕರೆ ಈಯುತ್ತದೆ. ಪಕ್ಷದ ಪೊಲಿಟ್‌ಬ್ಯೂರೋವು ಈ ಬಗ್ಗೆ ಈಗಾಗಲೇ ಕರೆ ಇತ್ತಿದೆ, ●

ಅಸ್ಸಾಂ ಸಮಸ್ಯೆಯ ಪರಿಹಾರಕ್ಕೆ ಪೊಲಿಟ್‌ಬ್ಯೂರೋ ಸಲಹೆಗಳು

ಅಸ್ಸಾಂನ ಪರಿಸ್ಥಿತಿಯ ಬಗ್ಗೆ ಈ ಹೇಳಿಕೆಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೋ ಜೂನ್ ಹನ್ನೊಂದರಂದು ಹೊರಡಿಸಿದೆ :

ಅಸ್ಸಾಂಗೆ ವಿದೇಶೀಯರ ಪ್ರವಾಹವನ್ನು ಕೊನೆಗೊಳಿಸಬೇಕೆಂಬ ಬೇಡಿಕೆಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಪೂರ್ಣವಾಗಿ ಬೆಂಬಲಿಸುತ್ತದೆ ಮತ್ತು ಈ ಸಮಸ್ಯೆಗೆ ಶಾಂತಿಯುತವಾದ ಮತ್ತು ನ್ಯಾಯ.ವಾದ ಪರಿಹಾರವನ್ನು ಕಂಡುಹಿಡಿಯಲು ಶ್ರಮಿಸುತ್ತಿದೆ. ಆದರೆ ಶೀಘ್ರ ಪರಿಹಾರದ ಆಸೆಗಳು ಇಲ್ಲವಾಗಿವೆ. ಅಸ್ಸಾಂನ ಪರಿಸ್ಥಿತಿಯಿಂದ ಈಗ ದೇಶಕ್ಕೆ ಅನೈಕ್ಯತೆಯ ಅಪಾಯ ಇದೆಯೆಂಬುದನ್ನು ಅರಿತುಕೊಳ್ಳುವಂತೆ, ಎಲ್ಲ ಪ್ರಜಾಸತ್ತಾತ್ಮಕ ಪಕ್ಷಗಳು ಮತ್ತು ಶಕ್ತಿಗಳಿಗೆ ಎಲ್ಲ ದೇಶಭಕ್ತ ಜನರಿಗೆ ಸಿ. ಪಿ.ಎಂ. ನ ಪೊಲಿಟ್‌ಬ್ಯೂರೋ ಕರೆ ನೀಡುತ್ತದೆ.

ವಿದೇಶಿ ಪ್ರವೇಶದಿಂದ ದೇಶವನ್ನು ರಕ್ಷಿಸುವ ಚಳುವಳಿ ಅಸ್ಸಾಂನಲ್ಲಿ ಇಲ್ಲ. ಈ ಬೇಡಿಕೆಗೆ ಅಲ್ಲಿನ ಜನತೆ ಭಾವನಾತ್ಮಕವಾಗಿ ಬೆಂಬಲ ನೀಡುತ್ತಿದ್ದಾರಲ್ಲದೆ, ವಿನಾಶಕಾರಿ ಶಕ್ತಿಗಳು ತಮ್ಮ ಪ್ರತ್ಯೇಕತಾವಾದಿ ಯೋಜನೆಗಳೊಂದಿಗೆ ಅಸ್ಥಿರತೆಯನ್ನು ಉಂಟು ಮಾಡಲು ಈ ವಿದೇಶಿ ಸಮಸ್ಯೆಯನ್ನು ಈಗ ಬಳಸಿಕೊಳ್ಳುತ್ತಿದ್ದಾರೆ. ಭಾರತದ ಪರಂಪರಾಗತ ಶತ್ರುಗಳಾದ ಸಾಮ್ರಾಜ್ಯಶಾಹಿಗಳು ಇವರ ರಾಷ್ಟ್ರವಿರೋಧಿ ಪ್ರಯತ್ನಗಳಿಗೆ ತಮ್ಮ ಪತ್ರಿಕೆ ಮತ್ತು ಬಾನುಲಿಗಳ ಮೂಲಕ ಪೂರ್ಣಬೆಂಬಲವನ್ನು ಬೆನ್ನಹಿಂದೆ ನೀಡುತ್ತಿದ್ದಾರೆ.

ಚಳುವಳಿಯ ನಾಯಕರು ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡು, ನಾಲ್ಕುವರೆ ಮಿಲಿಯ ವಿದೇಶಿಯರನ್ನು ಗುರುತಿಸಿ ಹೊರಗಟ್ಟುವ ಬೆದರಿಕೆಯನ್ನು ಇನ್ನೂ ನಡೆಸದಿದ್ದರೂ, ನೂರಾರು ಭಾರತೀಯರನ್ನು ಮನೆಗಳಿಂದ ಹೊರಹಾಕಿ ಅವರ ಆಸ್ತಿಗಳನ್ನು ಲೂಟಿಮಾಡಿ ಇಲ್ಲವೆ ನಾಶಮಾಡಿ ಅವರನ್ನು ನಿರಾಶ್ರಿತರನ್ನಾಗಿ ಮಾಡಿರುವ ಸಂಗತಿಯನ್ನು ಪೊಲಿಟ್‌ಬ್ಯೂರೋ ಕಳವಳದಿಂದ ಪರಿಶೀಲಿಸುತ್ತದೆ. ಇದರ ಪರಿಣಾಮವಾಗಿ ಈಗಾಗಲೇ ಸಾವಿರಾರು ಜನರು ಪಶ್ಚಿಮ ಬಂಗಾಳಕ್ಕೆ ವಲಸೆ ಬಂದಿದ್ದಾರೆ.

ಅಸ್ಸಾಂ ಸನ್ನಿವೇಶದ ತೀರ ದುರ್ಭರ ಅಂಶವೆಂದರೆ, ಅಸ್ಸಾಂ ಆಡಳಿತ, ಪೋಲೀಸು ಮತ್ತು ಆಡಳಿತ ಸೇವೆಗಳ ಬಹುಭಾಗವು ಈ ಚಳುವಳಿಯನ್ನು ಪ್ರೋತ್ಸಾಹಿಸಿ, ವಾಸ್ತವವಾಗಿ ಚಳುವಳಿಯ ಕೇಂದ್ರಗಳಾಗಿ ವರ್ತಿಸುತ್ತಿರುವುದು. ಸಂವಿಧಾನಕ್ಕೆ ಮತ್ತು ತಮ್ಮ ಕರ್ತವ್ಯಕ್ಕೆ ವಿಧೇಯರಾಗಿರುವ ಅಧಿಕಾರಿಗಳು ಕೆಲವರಿದ್ದರೂ, ಆಡಳಿತದ ಬಹುಭಾಗವು ದೇಶದ ಐಕ್ಯತೆಯನ್ನು ಹಾಳುಮಾಡುವ ಚಟುವಟಿಕೆಗಳನ್ನು ಪ್ರೋತ್ಸಾಹಿಸುತ್ತಿದೆ. ಹಳೆ ಐ. ಸಿ. ಎಸ್. ಅಧಿಕಾರಿಯಾಗಿದ್ದ ಅಸ್ಸಾಂ ರಾಜ್ಯಪಾಲರು, ಇಂಥ ರಾಷ್ಟ್ರವಿರೋಧಿ ಶಕ್ತಿಗಳನ್ನು ನಿಯಂತ್ರಿಸಲು ಪರಿಣಾಮಕಾರಿಯಾದ ಪ್ರಯತ್ನವನ್ನೇನೂ ಮಾಡಿಲ್ಲ; ಬದಲು ಇವರನ್ನು ಪ್ರೋತ್ಸಾಹಿಸಲು ಎಲ್ಲವನ್ನೂ ಮಾಡುವಂತೆ ತೋರುತ್ತದೆ. ಅಸ್ಸಾಂ ಆಡಳಿತದ ತುಂಬ ಅಪರಾಧಿ ವ್ಯಕ್ತಿಯೆಂದರೆ ಆತನೇ ಎಂದು ಗಣಿಸಬೇಕು.

ಜನತೆಯ ಹಕ್ಕುಗಳನ್ನು ರಕ್ಷಿಸುವ ಪ್ರಜಾಸತ್ತಾತ್ಮಕ ಚಳುವಳಿ ಇದಲ್ಲ. ಅಥವಾ ನಿರುದ್ಯೋಗ, ಬಡತನ, ಕೇಂದ್ರ ಸರ್ಕಾರದ ಅಲಕ್ಷ್ಯ, ಇವುಗಳ ವಿರುದ್ಧ ಹೂಡಿದ ಹೋರಾಟವೂ ಅಲ್ಲ. ಭಾರತದಿಂದ ಅಸ್ಸಾಮನ್ನು ಪ್ರತ್ಯೇಕಿಸುವ ಚಳುವಳಿ ಇದು. ಸಾಮ್ರಾಜ್ಯಶಾಹಿ ಏಜೆನ್ಸಿಗಳು ಬಹುಕಾಲದಿಂದಲೂ ಇದಕ್ಕೆ ಯೋಜನೆಗಳನ್ನು ಸಂಚಿಸುತ್ತಿದ್ದರು, ಅಲ್ಪ

(ಕಡೆ ಪುಟ ನೋಡಿ)

ಟ್ರೇಡ್‌ಯೂನಿಯನ್ ಸಮಾವೇಶ : ಟ್ರೇಡ್‌ಯೂನಿಯನ್ ಹಕ್ಕುಗಳಿಗಾಗಿ ರಚಿತವಾಗಿರುವ ಜಂಟಿ ಕ್ರಿಯಾಸಮಿತಿಯು ಜುಲೈ 14ರಂದು ರಾಜ್ಯಮಟ್ಟದ ಸಮಾವೇಶ ನಡೆಸಲಿದೆ. ಪುರಭವನದಲ್ಲಿ ನಡೆಯಲಿರುವ ಈ ಸಮಾವೇಶಕ್ಕೆ ಎಲ್ಲ ಪಕ್ಷಗಳ ಟ್ರೇಡ್‌ಯೂನಿಯನ್‌ಗಳಿಗೆ ಸೇರಿದ ಸಂಘಗಳೂ ತಮ್ಮ ಪ್ರತಿನಿಧಿಗಳನ್ನು ಕಳಿಸಿ ಇದನ್ನು ಯಶಸ್ವಿಗೊಳಿಸಬೇಕೆಂದು ಸಿ.ಐ.ಟಿ.ಯು. ಕೋರುತ್ತದೆ.

ಮಿಷನರಿಗಳ ಮೂಲಕ ಅಮೆರಿಕದ ಹಸ್ತಕ್ಷೇಪ

ಹತ್ತೊಂಬತ್ತನೇ ಶತಮಾನದಿಂದಲೂ ಭಾರತದ ಇಡೀ ಈಶಾನ್ಯ ಭಾಗ ಮಿಷನರಿಗಳ ಗಮನವನ್ನು ಸೆಳೆದಿದೆ. ತೊಂಬತ್ತು ವರ್ಷಗಳ ಹಿಂದೆಯೇ ತ್ರಿಪುರದ ಬುಡಕಟ್ಟು ಜನರೊಡನೆ ಕೆಲವು ಮಿಷನರಿಗಳು ಸಂಪರ್ಕ ಸಾಧಿಸಿದ್ದರೆಂಬುದನ್ನು ಕ್ರೈಸ್ತ ಮಿಷನರಿಗಳ ಚಟುವಟಿಕೆಗಳ ದಾಖಲೆಗಳು ತೋರಿಸುತ್ತವೆ. ಆದರೆ ತ್ರಿಪುರದ ಹಿಂದಿನ ರಾಜರು ತಮ್ಮ ರಾಜ್ಯದಲ್ಲಿ ಕ್ರೈಸ್ತ ಮಿಷನರಿಗಳು ತಳವೂರಲು ಅವಕಾಶ ಕೊಡಲಿಲ್ಲ.

ಆದರೆ ಮಹಾರಾಜನು ಸೇರಿದ ತ್ರಿಪುರಿ ಜನಾಂಗಕ್ಕೆ ಬಿಟ್ಟು ಉಳಿದ ಬುಡಕಟ್ಟುಗಳಿಗೆ ಕ್ರೈಸ್ತಮತವನ್ನು ಬೋಧಿಸಲು, 1937ರಲ್ಲಿ ಒಬ್ಬ ನ್ಯೂಜಿಲೆಂಡಿನ ಬಾಪ್ಟಿಸ್ಟ್ ಮಿಷನರಿಯಾದ ಡಾ. ಡಿ. ಎನ್. ಈಡ್, ರಾಜನ ಅನುಮತಿಯನ್ನು ಪಡೆದುಕೊಂಡ. ಡಾ. ಈಡ್ ಅಗರ್ತಲಾದಲ್ಲಿ ನ್ಯೂಜಿಲೆಂಡ್ ಬಾಪ್ಟಿಸ್ಟ್ ಕ್ರೈಸ್ತ ಸಂಘವನ್ನು 1938ರಲ್ಲಿ ಸ್ಥಾಪಿಸಿದ. ನಂತರ ತ್ರಿಪುರ ಬಾಪ್ಟಿಸ್ಟ್ ಕ್ರೈಸ್ತ ಸಂಘ ರಚನೆಯಾಯಿತು.

ಸ್ವಾತಂತ್ರ್ಯ ಬಂದನಂತರ ಈ ಮಿಷನ್‌ಗಳು ತಮ್ಮ ಚಟುವಟಿಕೆಗಳನ್ನು ತ್ರಿಪುರಿ ಬುಡಕಟ್ಟಿಗೂ ವಿಸ್ತರಿಸಿದರು. ಆದರೆ ಭಾರತೀಯ ರಹದಾರಿ ಕಾಯಿದೆ ಮತ್ತು ನಿಷೇಧಿತ ಪ್ರದೇಶ ಕಾನೂನುಗಳ ಪ್ರಕಾರ ಇವರೆಲ್ಲ ತ್ರಿಪುರದಿಂದ ಹೊರಡಬೇಕಾಯಿತು. ಇವರು ನಂತರ ತಮ್ಮ ಮಿಷನ್‌ಗಳನ್ನು ಸ್ಥಳೀಯ ಬುಡಕಟ್ಟು ಮತಾಂತರಿಗಳ ಉಸ್ತುವಾರಿಗೆ ಬಿಟ್ಟು ಹೋದರು.

ಹೀಗೆ ಹೋದವರಲ್ಲಿ ತ್ರಿಪುರ ಬಾಪ್ಟಿಸ್ಟ್ ಕ್ರೈಸ್ತ ಸಂಘದ ಬೈಬಲ್ ಸಂಸ್ಥೆಯ ನಿರ್ದೇಶಕನಾದ ರೆವರೆಂಡ್ ಬಿ. ಕೆ. ಸ್ಮಿತ್ ಪ್ರಮುಖನು. ಈತ ಮಿಜೋ ಬಂಡುಕೋರರ ಬಗ್ಗೆ ಸಹಾನುಭೂತಿ ಹೊಂದಿದ್ದು, ತ್ರಿಪುರದ ಜಾಂಪುಇ ಬೆಟ್ಟಗಾಡಿನ ಬುಡಕಟ್ಟುಗಳ ಮೇಲೆ ಬಂಡುಕೋರರ ಪ್ರಭಾವವನ್ನು ಹರಡಲು ಪ್ರಯತ್ನಿಸುತ್ತಿದ್ದ. ತ್ರಿಪುರದಿಂದ ಹೊರಹೋದ ಮೇಲೆ ಸ್ಮಿತ್ ಕಲ್ಕತ್ತದಿಂದ ಕಾರ್ಯ ಮುಂದುವರೆಸಿದನು.

ತ್ರಿಪುರ ಬಾಪ್ಟಿಸ್ಟ್ ಕ್ರೈಸ್ತ ಸಂಘವು ಬುಡಕಟ್ಟು ಜನರನ್ನು ಮತಾಂತರಗೊಳಿಸುವುದೇ ಅಲ್ಲದೆ, ಆಂಗ್ಲ ಶಿಕ್ಷಣದ ಮೂಲಕ ಅವರನ್ನು ಆಧುನಿಕಗೊಳಿಸುವುದರಲ್ಲೂ ತೊಡಗಿತ್ತು. ಹೀಗಾಗಿ ತ್ರಿಪುರದ ಹಿಂದುಳಿದ ಬುಡಕಟ್ಟುಗಳು, ಮಿಜೋಗಳು ಮತ್ತು ನಾಗಾಗಳ ನಡುವೆ ಭಾವನಾತ್ಮಕ ಸಂಬಂಧ ಏರ್ಪಡುತ್ತಿತ್ತು. ಈಶಾನ್ಯ ವಲಯದ ಪ್ರತ್ಯೇಕತಾ ಚಳುವಳಿಯಲ್ಲಿ ಆಸಕ್ತಿ ವಹಿಸತೊಡಗಿದಾಗ ಮಿಷನರಿಗಳ ಕಾರ್ಯ ಹೆಚ್ಚು ಗಮನ ಸೆಳೆಯಿತು.

ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದ ಹಿಮಾಲಯ ಗಡಿದೇಶಗಳ ಯೋಜನೆಯ ಮೊದಲಿನ ನಿರ್ದೇಶಕನಾಗಿದ್ದ ಚೀನಿ ಸಂಜಾತ ಡಾ. ಲೀರೋಸ್ ಈಶಾನ್ಯ ವಲಯದ ಅಧ್ಯಯನ ನಡೆಸುವ ನೆಪದಲ್ಲಿ ಬಂದಿದ್ದ. ಅಮೇರಿಕದ ದಕ್ಷಿಣಾ ವಿಭಾಗವು ವಿಶ್ವವಿದ್ಯಾಲಯದ ಮೂಲಕ ಅವನಿಗೆ ಧನಸಹಾಯ ನೀಡುತ್ತಿತ್ತು. ಸಂಸತ್‌ನಲ್ಲಿ 1968ರಲ್ಲಿ ಈ ಬಗ್ಗೆ ಪ್ರಶ್ನೆ ನಡೆದು ಯೋಜನೆಯ ಮುಂದುವರಿಕೆಯ ಅನುಮತಿಯನ್ನು ಹಿಂತೆಗೆದುಕೊಳ್ಳಲಾಯಿತು.

ತ್ರಿಪುರದ ಉತ್ತರ ಜಿಲ್ಲೆಯ ಲೂಸಾಈ ಮತ್ತು ರೀಂಗ್ ಬುಡಕಟ್ಟಿನೊಡನೆ ಸಂಬಂಧ ಸ್ಥಾಪಿಸಿಕೊಂಡಿದ್ದ ಸ್ಮಿತ್, ಮಿಜೋ ಬಂಡುಕೋರರಿಗೆ ಬೆಂಬಲನೀಡಿ ಮಿಜೋಗಳು ತ್ರಿಪುರ ಬಾಪ್ಟಿಸ್ಟ್ ಕ್ರೈಸ್ತ ಸಂಘ ಸೇರುವಂತೆ ಪ್ರೇರೇಪಿಸುತ್ತಿದ್ದ.

ಈಶಾನ್ಯ ವಲಯದ ಪ್ರತಿಯೊಂದು ರಾಜ್ಯಕ್ಕೂ ಬೇರೆಬೇರೆ ಬಾಪ್ಟಿಸ್ಟ್ ಸಂಸ್ಥೆ ಇದೆ. ಆದರೂ ಅವರು ಇಡೀ ವಲಯಕ್ಕೆ ಒಂದು ಸಂಸ್ಥೆಯನ್ನು ಎಂದರೆ ಈಶಾನ್ಯ ಭಾರತ ಕ್ರೈಸ್ತ ಮಂಡಲಿಯನ್ನು ರಚಿಸಿಕೊಂಡಿದ್ದಾರೆ.

ಈ ಪ್ರತಿಯೊಂದು ಮಿಷನರಿ ಸಂಘವೂ ಅಂತರರಾಷ್ಟ್ರೀಯ ರಂಗದಲ್ಲಿ ಬೇರೆ ಮಿಷನರಿ ಸಂಸ್ಥೆಗೆ ಅಂಗಸಂಸ್ಥೆಯಾಗಿದೆ. ತ್ರಿಪುರದ ಸಂಘಕ್ಕೆ ನ್ಯೂಜಿಲೆಂಡ್‌ನ ಸಂಬಂಧವಿದೆ. ಮಿಜೋರಾಮ್‌ನ ಸಂಘಕ್ಕೆ ಲಂಡನ್ನಿನ ಸಂಬಂಧವಿದೆ. ಆದರೆ ಎಲ್ಲ ಸಂಘಗಳ ಕೇಂದ್ರಸ್ಥಾನ ಅಮೇರಿಕದ ವಿಶ್ವ ಬಾಪ್ಟಿಸ್ಟ್ ಸಂಘ. ಡಾ. ಬಿಲ್ಲಿಗ್ರಹಾಂ ಇದರ ಮುಖ್ಯ ಕಾರ್ಯಕರ್ತರಲ್ಲೊಬ್ಬ.

ಡಾ. ಲೀರೋಸ್ ಪ್ರಕರಣದಿಂದ, ವಿಶ್ವ ಬಾಪ್ಟಿಸ್ಟ್ ಸಂಘವು ಅಮೇರಿಕದ ಗೂಢಚಾರ ಸಂಸ್ಥೆಗಳಿಗೆ ಸಂಬಂಧಿಸಿದುದೆಂಬುದನ್ನು ಸುಲಭವಾಗಿ ತೀರ್ಮಾನಿಸಬಹುದು. ತಮ್ಮ ದುಷ್ಟ ಗೂಢಚಾರ ಕಾರ್ಯಗಳಿಗೆ ಅಮೇರಿಕದ ಸಿ. ಐ. ಎ. ಮಿಷನರಿಗಳನ್ನು ಉಪಯೋಗಿಸಿಕೊಳ್ಳುತ್ತಿದೆ ಎಂಬುದು ಈಗ ಬಹಿರಂಗ ಸತ್ಯ. ಈಶಾನ್ಯ ವಲಯದ ಪ್ರತ್ಯೇಕತಾ ಚಳುವಳಿಯೊಂದಿಗೆ ಮಿಷನರಿಗಳ ಸಂಬಂಧ ಬೆಳೆದುದೂ ಇದರಿಂದಲೇ.

ಡಾ. ಬಿಲ್ಲಿ ಗ್ರಹಾಂನ ಸಂಸ್ಥೆಗೆ ಸೇರಿದ ಡಾ. ಆರ್. ಕೆನ್‌ವಿಲ್ "ಜನತೆಯ ಚಳುವಳಿಯಿಂದ ಇಗರ್ಜಿ ಬೆಳೆಯುತ್ತದೆ" ಎಂಬ ಸಣ್ಣ ಪುಸ್ತಿಕೆಯನ್ನು 1978ರಲ್ಲಿ ಹಂಚುತ್ತಿದ್ದ. ಇದರಲ್ಲಿ, ತ್ರಿಪುರ ಉಪಜಾತಿ ಯುವ ಸಮಿತಿಯ ಚಳುವಳಿಯ ಬಗ್ಗೆ ಅವನು ತೃಪ್ತಿವ್ಯಕ್ತಪಡಿಸಿದ್ದ. ತ್ರಿಪುರದ ಕ್ರೈಸ್ತ ಸಂಘಕ್ಕೆ ಧನಸಹಾಯ ಮಾಡಬೇಕೆಂದು ಇತರ ಮಿಷನ್‌ಗಳನ್ನು ಕೋರಿದ್ದನು.

ಮಿಜೋ ನ್ಯಾಷನಲ್ ಫ್ರಂಟ್‌ನ ಬಂಡುಕೋರರು ಮತ್ತು ಬಾಪ್ಟಿಸ್ಟ್ ಮಿಷನರಿಗಳ ನಡುವೆ ಬಲವಾದ ಸಂಬಂಧಗಳಿವೆ. ಚಿತ್ತಗಾಂಗ್ ಬೆಟ್ಟದಲ್ಲಿ ಫ್ರಂಟ್‌ನ ಮುಖ್ಯ ಕಚೇರಿ ಇದ್ದು, ಅವರಿಗೆ ಸುಧಾರಿತ ಆಯುಧಗಳ ಸರಬರಾಜು ಆಗತ್ತಿದೆ. ಫ್ರಂಟ್‌ನ ತರಬೇತಿ ಕೇಂದ್ರಗಳಲ್ಲಿ ಮಿಷನರಿಗಳು ಸಕ್ರಿಯ ಪಾತ್ರ ವಹಿಸುತ್ತಿದ್ದಾರೆ. ಫ್ರಂಟ್ ಸೇರಿಸಿಕೊಳ್ಳುವಾಗ ತರಬೇತಿ ಪಡೆಯುವವರು ಬೈಬಲ್ ಹಿಡಿದು ಪ್ರಮಾಣಮಾಡಬೇಕೆಂದು ಒಬ್ಬ ಅಭ್ಯರ್ಥಿ ಹೇಳಿದ್ದಾನೆ.

ನ್ಯಾಷನಲ್ ಫ್ರಂಟ್‌ನ ಮೂಲಕ ಈಶಾನ್ಯದಲ್ಲಿ ಒಂದು ಕ್ರೈಸ್ತ ರಾಜ್ಯದ ಕನಸನ್ನು ಈಡೇರಿಸಿಕೊಳ್ಳಲು ಬಾಪ್ಟಿಸ್ಟರು ಪ್ರಯತ್ನಿಸುತ್ತಿದ್ದಾರೆಂಬುದನ್ನು ನಂಬಲು ಬಹಳ ಕಾರಣಗಳು ಸಿಗುತ್ತವೆ. ಬಾಪ್ಟಿಸ್ಟರಿಗೂ ಅಮೇರಿಕಾಗೂ ಇರುವ ಸಂಬಂಧ ಸಿ ಐ ಎ ಅನ್ನೂ ಇಲ್ಲಿ ಒಳಗೊಂಡಿದೆ. ನಾಗಾಗಳು ಮಿಜೋಗಳನ್ನು ಮತಾಂತರಗೊಳಿಸಿದ ದಂಗೆಯ ಬೀಜ ಬಿತ್ತುವ ಹಾಗೆ ತ್ರಿಪುರದಲ್ಲಿ ಬುಡಕಟ್ಟಿನವರನ್ನು ಮತಾಂತರಗೊಳಿಸಲು ಪ್ರಯತ್ನಿಸುತ್ತಿದ್ದಾರೆ.

1967 ರಿಂದ ತ್ರಿಪುರ ಉಪಜಾತಿ ಯುವಸಮಿತಿ ಅಸ್ತಿತ್ವದಲ್ಲಿದ್ದರೂ ವಾಮರಂಗ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆಯೇ ಸಮಿತಿಯ ಉಗ್ರಗಾಮಿಗಳು ಬುಡಕಟ್ಟಿಗೆ ಸೇರದವರ ಮೇಲೆ ಹಲ್ಲೆ, ಪೋಲೀಸು ಠಾಣೆಗಳ ಆಕ್ರಮಣ ಇತ್ಯಾದಿಗಳನ್ನು ಆರಂಭಿಸಿರುವುದು ಗಮನಾರ್ಹ. ಸಮಿತಿಯ ನಾಯಕರು ಬಾಪ್ಟಿಸ್ಟರ ಮೂಲಕ ಮಿಜೋ ನ್ಯಾಷನಲ್ ಫ್ರಂಟಿನ ಸಂಬಂಧ ಸ್ಥಾಪಿಸಿಕೊಂಡಿದ್ದಾರೆ.

ತ್ರಿಪುರದ ಬುಡಕಟ್ಟು ಭಾಷೆಗೆ ರೋಮನ್ ಲಿಪಿಯನ್ನು ಜಾರಿಗೆ ತರಬೇಕೆನ್ನುವ ಸಮಿತಿಯ ಬೇಡಿಕೆ ಬಾಪ್ಟಿಸ್ಟರಿಂದ ಪ್ರಚೋದಿತವಾಗಿದೆ. ಬುಡಕಟ್ಟು ಭಾಷಾ ಶಾಲೆಗಳಲ್ಲಿ ರೋಮನ್ ಲಿಪಿಯ ಮೂಲಕ ಶಿಕ್ಷಣ ನೀಡಲಾಗುತ್ತಿದ್ದು ಇದಕ್ಕೆ ಬಾಪ್ಟಿಸ್ಟರು ಹಣಸಹಾಯ ಮಾಡುತ್ತಿದ್ದಾರೆ. ಬಾಪ್ಟಿಸ್ಟರಿಗೆ ನ್ಯೂಜಿಲೆಂಡಿನಿಂದ ವರ್ಷಕ್ಕೆ 10 ಲಕ್ಷ ರೂ. ದೊರೆಯುತ್ತದೆ. ಅಮೆರಿಕವೂ ಇದಕ್ಕೆ ಸಹಾಯ ಮಾಡುತ್ತಿದೆ. ದೆಹಲಿ, ಕಲ್ಕತ್ತ, ಮದ್ರಾಸುಗಳ ಕ್ರೈಸ್ತ ಸಂಸ್ಥೆಗಳಿಂದ ತ್ರಿಪುರ ಕ್ರೈಸ್ತ ಸಂಘಕ್ಕೆ ಧನ ಸಹಾಯ ಬರುತ್ತಿದೆ. ಇವೆಲ್ಲ 1977ರ ನಂತರವೇ ಆರಂಭವಾದದ್ದೆಂಬುದು ಗಮನಾರ್ಹ. ತ್ರಿಪುರ ಬುಡಕಟ್ಟಿನವರನ್ನು ಮಾತ್ರ ಕ್ರೈಸ್ತ ಸಂಸ್ಥೆಗಳು ಉದ್ಯೋಗಕ್ಕೆ ನೇಮಿಸಿಕೊಳ್ಳುತ್ತವೆ. ಬುಡಕಟ್ಟಿನವರು ಕಮ್ಯುನಿಸಂನಿಂದ ದೂರವಿರಲೆಂಬ ದುರುದ್ದೇಶ ಈ ಎಲ್ಲ ಕೆಲಸಗಳ ಹಿಂದೆ ಇದೆ.

●

ಐ. ಟಿ. ಸಿ. ಕಾರ್ಮಿಕ ಸಂಘಟನೆಗಳ ಫೆಡರೇಷನ್ ರಚಿಸಲು ಸಿದ್ಧತೆ

ಬಹುರಾಷ್ಟ್ರೀಯ ಕಂಪೆನಿಯಾದ ಇಂಡಿಯನ್ ಟೊಬೇಕೋ ಕಂಪೆನಿಯ ಹೋಟೇಲ್ಸು, ಪೇಪರ್, ಹೊಗೆಸೊಪ್ಪು, ವಿಲಾಸಗಾರಿಕೆ ಮತ್ತು ಸಿಗರೇಟು ಉತ್ಪಾದನೆಗೆ ಸೇರಿದ ಬೊಂಬಾಯಿ, ಮದ್ರಾಸು, ಬೆಂಗಳೂರು. ಆಂಧ್ರ ಪ್ರದೇಶದ ಘಟಕಗಳಲ್ಲಿ ದುಡಿಯುವ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳ ಸಭೆಯು 21-6-80ರಂದು ಬೆಂಗಳೂರಲ್ಲಿ ನಡೆಯಿತು. ರಾಷ್ಟ್ರದಾದ್ಯಂತ ಪಸರಿಸಿರುವ ಐ. ಟಿ ಸಿ. ಕಂಪೆನಿಯ 30 000 ಕಾರ್ಮಿಕರ ಸಂಘಟನೆಗಳ ರಾಷ್ಟ್ರೀಯ ಮಟ್ಟದ ಫೆಡರೇಷನ್ ರಚಿಸಿ, ಎಲ್ಲಾ ಕಡೆ ಒಂದೇ ಸಮನಾದ ವೇತನ ಮತ್ತು ಸವಲತ್ತುಗಳಿಗಾಗಿ ಹೋರಾಡಲು ಸಾಧ್ಯವಾಗುವಂತೆ ಮಾಡಲು ಈ ಸಭೆಯು ತೀರ್ಮಾನಿಸಿತು. ಜುಲ್ಯೈ 22 ಮತ್ತು 23ರಂದು ಬೆಂಗಳೂರಲ್ಲಿ ನಡೆಯಲಿರುವ ಸಮಾವೇಶದಲ್ಲಿ ಫೆಡರೇಷನನ್ನು ರಚಿಸಲು ನಿರ್ಣಯಿಸಿದ ಸಭೆಯು ಹದಿನಾಲ್ಕು ಮಂದಿಯ ಸಮಾವೇಶ ಸಿದ್ಧತಾ ಸಮಿತಿಯನ್ನು ರಚಿಸಿತು. ಮದ್ರಾಸಿನ ಕಾಂ. ಮೋಹನ್‌ಗೋಪಾಲ್ ಸಂಚಾಲಕರಾಗಿರುವ ಈ ಸಮಿತಿಗೆ ಕಾಂ. ಸೋಮನಾಥ ಚಟರ್ಜಿ, ಎಂ. ಪಿ., ಇವರನ್ನು ಅಧ್ಯಕ್ಷರನ್ನಾಗಿ ಮಾಡಲಾಗಿದೆ. ಈ ಸಮಿತಿಯಲ್ಲಿ ಕಲಕತ್ತಾದಿಂದ ಇಬ್ಬರು, ಬಿಹಾರದ ಮೊಂಘೀರಿನಿಂದ ಇಬ್ಬರು, ಉತ್ತರ ಪ್ರದೇಶದ ಶಾರದಾಪುರದಿಂದ ಇಬ್ಬರು, ಬೊಂಬಾಯಿಯಿಂದ ಕಾಂ. ಮದನ ಪಟ್ನೀಸ್ (ಸಿ. ಐ. ಟಿ. ಯು. ವರ್ಕಿಂಗ್ ಸಮಿತಿ ಸದಸ್ಯ), ಕಾಂ. ರಾಮಾನುಜಂ, ಆಂಧ್ರದಿಂದ ಕಾಂ. ಬಾಲಾಜಿದಾಸ್ (ಸಿ. ಐ. ಟಿ. ಯು. ವರ್ಕಿಂಗ್ ಕಮಿಟಿ ಸದಸ್ಯ), ಬೋಪೇಶ್ವರ ಶರ್ಮ, ಮದ್ರಾಸಿನಿಂದ ಕುಚೇಲರ್ ಮತ್ತು ಮೋಹನ್ ಗೋಪಾಲ, ಬೆಂಗಳೂರಿನಿಂದ ಎಸ್. ಸೂರ್ಯನಾರಾಯಣರಾವ್ ಇರುವರು.

ಬೆಂಗಳೂರು ಐ ಟಿ. ಸಿ. ಕಾರ್ಮಿಕರ ಬೇಡಿಕೆಗಳನ್ನು ಕೂಡಲೇ ಈಡೇರಿಸದಿದ್ದಲ್ಲಿ ಜುಲ್ಯೈ 11ರಂದು ಎಲ್ಲೆಡೆಗಳಲ್ಲೂ ಒಂದು ದಿನದ ಮುಷ್ಕರವನ್ನು ನಡೆಸಲು ತೀರ್ಮಾನಿಸಲಾಯ್ತು. ಮತ್ತು ಬೇಡಿಕೆಗಳು ಈಡೇರದಿದ್ದಲ್ಲಿ ಮುಂದೆ ಏನು ವ್ಯಾಪಕ ಕ್ರಮವನ್ನು ತೆಗೆದುಕೊಳ್ಳುವುದೆಂದು ಜುಲ್ಯೈ 22, 23ರ ಸಮಾವೇಶದಲ್ಲಿ ನಿರ್ಣಯಿಸಲಾಗುವುದು. ಮದ್ರಾಸಿನ ಐ. ಟಿ. ಸಿ. ಘಟಕದ ಕಾರ್ಮಿಕರು ಈಗಾಗಲೇ ಬೆಂಗಳೂರು ಐ. ಟಿ ಸಿ. ಕಾರ್ಮಿಕರಿಗೆ ರೂ. 10,000 ಸಹಾಯ ಧನವಿತ್ತಿದ್ದು. ಬೊಂಬಾಯಿ ಐ ಟಿ ಸಿ. ಕಾರ್ಮಿಕರು ಒಂದು ದಿನದ ಕೂಲಿಯನ್ನು ಶೇಖರಿಸಿ ರೂ. 10,000 ಸಹಾಯ ಕೊಡಲು ನಿರ್ಣಯಿಸಿರುವರು.

21ರಂದು ಸಂಜೆ ಬೆಂಗಳೂರಿನ ಶಿವನಚೆಟ್ಟಿ ಗಾರ್ಡನಿನಲ್ಲಿ ಸುಮಾರು 4000 ಮಂದಿ ಕಾರ್ಮಿಕರ ಬೃಹತ್ ರ್‍ಯಾಲಿ, ಬಹಿರಂಗಸಭೆ ನಡೆಯಿತು. ಕಾಂ. ಎಸ್. ಸೂರ್ಯನಾರಾಯಣ ರಾವ್ ಅಧ್ಯಕ್ಷತೆ ವಹಿಸಿದ್ದ ಈ ಸಭೆಯಲ್ಲಿ ಕಾರ್ಮಿಕರ ಮುಖಂಡರಾದ ಕುಚೇಲರ್, ರಾಮಾನುಜಂ, ಬಾಲಾಜಿದಾಸ್ ಮೊದಲಾದವರು ಹೋರಾಡುತ್ತಲಿರುವ ಐ ಟಿ ಸಿ ಕಾರ್ಮಿಕರಿಗೆ ಬೆಂಬಲ ನೀಡಿದರು.

21ರ ಸಭೆಯ ನಿರ್ಣಯವು ಬೆಂಗಳೂರಿನ ಐ ಟಿ ಸಿ ಕಾರ್ಮಿಕರ ಹೋರಾಟಕ್ಕೆ ಒಂದು ಹೊಸ ತಿರುವನ್ನು ನೀಡಲಿದೆ. ಬಹುರಾಷ್ಟ್ರೀಯ ಕಂಪೆನಿಯ ವಿರುದ್ಧದ ಹೋರಾಟವನ್ನು ಎಲ್ಲಾ ಕಡೆಯೂ ನಡೆಸುವುದು ಅಗತ್ಯವಾರಿದೆ.

○

ಕಾಂ. ಕುಂಜಂಬು ನಿಧನಕ್ಕೆ ಸಂತಾಪ

ಕಾಂ. ಎ ವಿ. ಕುಂಜಂಬು ಅವರ ಮರಣಕ್ಕೆ ಸಂತಾಪ ಸೂಚಿಸುವ ಸಲುವಾಗಿ ಭದ್ರಾವತಿ ತಾಲ್ಲೂಕು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಛೇರಿಯಲ್ಲಿ ಸಭೆ ಸೇರಿತ್ತು. ಕಾಂ. ಮಹಮದ್ ರಫಿ ಅಧ್ಯಕ್ಷತೆ ವಹಿಸಿದ್ದರು. ಕಾಂ. ಸುಕುಮಾರನ್ ಮತ್ತು ಸತ್ಯಪಾಲನ್ ಕುಂಜಂಬು ಅವರ ಬಗ್ಗೆ ಮಾತನಾಡಿದ್ದರು.

●

ಸಮಾವೇಶ ಮುಂದಕ್ಕೆ

ಇದೇ ತಿಂಗಳ 29 ರಂದು ನಡೆಯಲಿದ್ದ ಮಂಗಳೂರು ತಾಲ್ಲೂಕು ಯುವಜನ ಸಂಘಟನೆಯ ಪ್ರಥಮ ಸಮಾವೇಶವು ಕಾರಣಾಂತರಗಳಿಂದ ಮುಂದಕ್ಕೆ ಹೋಗಿದೆ. ಸಮಾವೇಶವನ್ನು ಜುಲೈ 6ರಂದು ನಡೆಸಲಾಗುವುದೆಂದು ತಾಲ್ಲೂಕು ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿದೆ.

●

ದ. ಕೊರಿಯಾದಲ್ಲಿ ಫ್ಯಾಸಿಸ್ಟ್-ಮಿಲಿಟರಿ ಪಂಗಡದ ವಿರುದ್ಧ ವಿರೋಚಿತ ಹೋರಾಟ

ಚಾರಿತ್ರಿಕ ಹಿನ್ನೆಲೆ:

ಕೊರಿಯಾ ಚೀನಾ ದೇಶದ ದಕ್ಷಿಣಕ್ಕಿದೆ. ಅದೊಂದು ಅತ್ಯಂತ ಜನನಿಬಿಡವಾದ ಪ್ರಮುಖ ದೂರ ಪ್ರಾಚ್ಯ ದೇಶವಾಗಿದೆ. ಇಪ್ಪತ್ತನೇ ಶತಮಾನದಲ್ಲಿ ಬಲಿಷ್ಠವಾಗಿ ಬೆಳೆದು ಬಂದ ಬಂಡವಾಳಶಾಹಿ ರಾಷ್ಟ್ರವಾದ ಜಪಾನು 1910ರಲ್ಲಿಯೇ ಕೊರಿಯಾ ದೇಶವನ್ನು ತನ್ನ ವಸಾಹತುವಾಗಿ ಕಬಳಿಸಿಕೊಂಡಿತು. ಮುಂದಿನ ಸುಮಾರು ನಾಲ್ಕು ದಶಕಗಳಲ್ಲಿ ಕೊರಿಯಾದ ಜನರು ರಾಷ್ಟ್ರೀಯ ವಿಮೋಚನಾ ಚಳುವಳಿ ನಡೆಸಿದರು. ಎರಡನೇ ಜಾಗತಿಕ ಯುದ್ಧದಲ್ಲಿ ಜಪಾನು ಸೋತ ಮೇಲೆ ಕೊರಿಯಾದ ಜನರು ರಾಷ್ಟ್ರೀಯ ಐಕ್ಯತೆ ಮತ್ತು ಸ್ವಾತಂತ್ರ್ಯಕ್ಕಾಗಿ ಬಿರುಸಿನ ಹೋರಾಟ ನಡೆಸಿದರು. ಪರಿಣಾಮವಾಗಿ, 1948ರ ಮೇ 1ರಂದು ಉ. ಕೊರಿಯಾದಲ್ಲಿ ಕಾರ್ಮಿಕ ಪಕ್ಷದ ನೇತೃತ್ವದಲ್ಲಿ ಸಮಾಜವಾದಿ ರಾಷ್ಟ್ರವೊಂದು ನಿರ್ಮಾಣವಾಯಿತು. ಪ್ರಜಾಸತ್ತಾತ್ಮಕ ಜನತಾ ಗಣರಾಜ್ಯದ ಸ್ಥಾಪನೆಯಾಯಿತು. ಇಲ್ಲಿ ಎಲ್ಲಾ ಕೈಗಾರಿಕೆಗಳನ್ನು ರಾಷ್ಟ್ರೀಕರಿಸಲಾಯಿತು. ವ್ಯವಸಾಯ ಭೂಮಿಯನ್ನು ಮೊದಲು ರೈತರಿಗೆ ಮರುವಿತರಣೆ ಮಾಡಲಾಯಿತು. ಮುಂದೆ ಕಾಲಕ್ರಮೇಣ ಕೃಷಿಕ್ಷೇತ್ರದಲ್ಲಿ ಸಹಕಾರಿ ಹಾಗೂ ಸಮುದಾಯ ಪದ್ಧತಿಗಳನ್ನು ಅನುಸರಿಸಿ ಆಹಾರ ಧಾನ್ಯಗಳ ಮತ್ತು ಕೈಗಾರಿಕಾ ಕಚ್ಚಾ ವಸ್ತುಗಳ ಉತ್ಪಾದನೆಯಲ್ಲಿ ಅನತಿ ಕಾಲದಲ್ಲಿಯೇ ಸ್ವಾವಲಂಬಿ ದೇಶವಾಯಿತು. ಕೈಗಾರಿಕೆಗಳಲ್ಲಿ, ಮುಖ್ಯವಾಗಿ ವಿದ್ಯುತ್, ಯಂತ್ರೋತ್ಪಾದನೆ, ಗನಿ ಮತ್ತು ಲೋಹ, ರಸಾಯನಿಕ ಮುಂತಾದ ಬೃಹತ್ ಕೈಗಾರಿಕೆಗಳಲ್ಲಿ ಉ. ಕೊರಿಯಾ ಭಾರೀ ಸಾಧನೆಯನ್ನು ಗಳಿಸಿತು. ಲೋಹ ಕೈಗಾರಿಕೆಯಲ್ಲಿ ಈ ದೇಶವು ಪ್ರಪಂಚದ ಐದು ಪ್ರಮುಖ ದೇಶಗಳಲ್ಲಿ ಒಂದಾಯಿತು. ಸ್ವಾತಂತ್ರ್ಯ, ಸ್ವಾವಲಂಬನೆ, ಆರ್ಥಿಕ ಅಭಿವೃದ್ಧಿ, ರಾಜಕೀಯ ಸ್ಥಿರತೆ ಇಲ್ಲಿ ನೆಲೆಸಿವೆ. ಸಾಮ್ರಾಜ್ಯಶಾಹಿಗಳ ಪಿತೂರಿ ಹಸ್ತಕ್ಷೇಪಗಳಿಂದ ಮುಕ್ತವಾಗಿದೆ. 1970ರ ದಶಕದ ಮೊದಲಲ್ಲಿ ಇಲ್ಲಿನ ಜನಸಂಖ್ಯೆಯು 1.5 ಕೋಟಿಯಷ್ಟಾಗಿದ್ದು, ಶೋಷಣಾರಹಿತ ಸಮಾಜವಾದಿ ವ್ಯವಸ್ಥೆಯ ಫಲವನ್ನು ಜನರು ಅನುಭವಿಸುತ್ತಿದ್ದು, ಹೊಸ ವ್ಯವಸ್ಥೆಯ ಭದ್ರತೆಗೆ ಮತ್ತು ಪ್ರಗತಿಗೆ ದೃಢಮನಸ್ಕರಾಗಿ ಶ್ರಮಿಸುತ್ತಿದ್ದಾರೆ.

ಆದರೆ, ದ. ಕೊರಿಯಾದ ವಿದ್ಯಮಾನಗಳು ತೀರಾ ವಿರುದ್ಧವಾಗಿವೆ. ಎರಡನೇ ಜಾಗತಿಕ ಯುದ್ಧಾನಂತರ ಕೊರಿಯಾ ದೇಶ ಒಂದಾಗಿರುವುದು ಅಮೇರಿಕ ಸಂಯುಕ್ತ ಸಂಸ್ಥಾನಕ್ಕೆ ಬೇಡವಾಗಿತ್ತು. ಯುದ್ಧಕಾಲದಲ್ಲಿ ಜಪಾನು-ಜರ್ಮನಿ-ಇಟಲಿ ದೇಶಗಳಲ್ಲಿನ ಫ್ಯಾಸಿಸ್ಟ್ ಕೂಟವನ್ನು ಸೋಲಿಸಲು ಅಮೇರಿಕ ರಷ್ಯಾದ ನೆರವನ್ನು ಅನಿವಾರ್ಯವಾಗಿ ಪಡೆಯಿತಾದರೂ, ಯುದ್ಧಾನಂತರ ಅದು ತನ್ನ ಹೊಸ ವಸಾಹತುಗಳನ್ನು ಪಡೆಯಲು ಕೊರಿಯಾದ ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡಿತು. 1948ರ ಆಗಸ್ಟ್ 15ರಂದು ಅಲ್ಲಿ ತನ್ನ ಕೈಗೊಂಬೆ ಸರಕಾರ ಒಂದನ್ನು ಬೆಂಬಲಿಸಿತು. ಉ. ಕೊರಿಯಾ ಮತ್ತು ದ. ಕೊರಿಯಾ ಒಂದಾಗುವ ಜನತಾ ಹೋರಾಟವನ್ನು ತನ್ನ ಮಿಲಿಟರಿ ನೆರವಿನಿಂದ 1950ರ ದಶಕದ ಮೊದಲ ವರ್ಷಗಳಲ್ಲಿಯೇ ಹತ್ತಿಕ್ಕಿತು. ಅಂದಿನಿಂದ ಇಂದಿನವರೆಗೂ ಅಮೇರಿಕ ಅಲ್ಲಿ ತನ್ನ ಪ್ರಬಲವಾದ ಮಿಲಿಟರಿ ನೆಲೆಯನ್ನಿರಿಸಿದೆ. ಎರಡನೇ ಜಾಗತಿಕ ಯುದ್ಧಾನಂತರ ಪೂರ್ವಯುರೋಪ್, ಚೀನಾ, ಉ. ವಿಯಟ್ನಾಂ, ಕ್ಯೂಬಾ ಮುಂತಾದ ರಾಷ್ಟ್ರಗಳು ಸಮಾಜವಾದಿ ವ್ಯವಸ್ಥೆಯನ್ನು ಸ್ಥಾಪಿಸಿದುದು ಅಮೇರಿಕ ಮತ್ತು ಅದರ ಮಿತ್ರ ರಾಷ್ಟ್ರಗಳಿಗೆ ಭಯ ಹುಟ್ಟಿಸಿತು. ಸಮಾಜವಾದಿ ರಾಷ್ಟ್ರಗಳ ವಿರುದ್ಧ ಮತ್ತು ಹೊಸತಾಗಿ ಸ್ವಾತಂತ್ರ್ಯಗೊಂಡ ರಾಷ್ಟ್ರಗಳಲ್ಲಿ ಸಮಾಜವಾದಿ ವ್ಯವಸ್ಥೆ ಬರದಂತೆ ನೋಡಿಕೊಳ್ಳಲು ಪ್ರಪಂಚದಾದ್ಯಂತ ತನ್ನ ಮಿಲಿಟರಿ ನೆಲೆಗಳೊಂದಿಗೆ ದ. ಕೊರಿಯದ ನೆಲೆಯನ್ನೂ ಬಲಗೊಳಿಸಿತು.

ಪರಿಣಾಮವಾಗಿ, ದ. ಕೊರಿಯಾದ 3.5 ಕೋಟಿ (1970ರ ಮೊದಲಲ್ಲಿ) ಜನರು ಉತ್ತರದ ತಮ್ಮ ದೇಶಬಾಂಧವರಿಂದ ಅಸಹಜವಾಗಿ ಬೇರ್ಪಡಿಸಲ್ಪಟ್ಟರು. ರಾಷ್ಟ್ರೀಯ ಐಕ್ಯತೆ ಹಾಗೂ ಸ್ವಾತಂತ್ರ್ಯ, ಸ್ವಾವಲಂಬನೆಗಾಗಿ ಹೋರಾಡುತ್ತಿರುವ ದ. ಕೊರಿಯಾದ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ದಮನಿಸಲು ಅಮೇರಿಕ ಸಾಮ್ರಾಜ್ಯಶಾಹಿಗಳ ಮತ್ತು ಜಪಾನಿ ಏಕಸ್ವಾಮ್ಯ ಬಂಡವಾಳಶಾಹಿಗಳ ಬೆಂಬಲ ಪಡೆದ ಕೈಗೊಂಬೆ ಸರಕಾರಗಳು ಇಲ್ಲಿ ಅಧಿಕಾರಕ್ಕೆ ಬಂದವು. 1948ರಲ್ಲಿ ಪ್ರಾರಂಭವಾದ ಪಾರ್ಲಿಮೆಂಟರಿ ಪ್ರಜಾಸತ್ತೆಯು 1960ರಷ್ಟರಲ್ಲಿಯೇ ಕೊನೆಗೊಂಡಿತು. ಮುಂದೆ 1963ರವರೆಗೆ ಮಿಲಿಟರಿ ಆಡಳಿತ ಜಾರಿಗೆ ಬಂದಿತು. 1963ರಲ್ಲಿ ಸಂವಿಧಾನಕ್ಕೆ ತಿದ್ದುಪಡಿಯಾಗಿ ಅಧ್ಯಕ್ಷೀಯ ಪದ್ಧತಿ ಬಂತು. ಅಧಿಕಾರಗಳೆಲ್ಲವೂ ರಾಷ್ಟ್ರಾಧ್ಯಕ್ಷನಲ್ಲಿ ಕೇಂದ್ರೀಕೃತವಾದವು. ರಾಷ್ಟ್ರೀಯ ಸಂಸತ್ತು (ಪಾರ್ಲಿಮೆಂಟ್) ಅಧ್ಯಕ್ಷನ ಸಲಹಾ ಸಮಿತಿಯಂತಿರಬೇಕಾಯಿತು. ಪ್ರಧಾನಮಂತ್ರಿಯನ್ನೂ, ಮಂತ್ರಿಮಂಡಳಿಯನ್ನೂ ಅಧ್ಯಕ್ಷನೇ ನೇಮಿಸುವಂತಾಯಿತು. ಅಧ್ಯಕ್ಷನ ಹಿಂದೆ ದೇಶದ ಫ್ಯಾಸಿಸ್ಟ್-ಮಿಲಿಟರಿ ಅಧಿಕಾರಿಗಳು. ಅವರ ಹಿಂದೆ ಅಮೇರಿಕದ ಸಾಮ್ರಾಜ್ಯಶಾಹಿ ಮಿಲಿಟರಿ ಅಧಿಕಾರಿಗಳು ದ. ಕೊರಿಯಾದ ಆಡಳಿತ ಸೂತ್ರವನ್ನು ವಹಿಸಿದ್ದರು. ಕೃಷಿಪ್ರಧಾನವಾದ ಈ ದೇಶವನ್ನು ಅಮೇರಿಕ ಮತ್ತು ಜಪಾನು ತಮ್ಮ ಆರ್ಥಿಕ ಅಭಿವೃದ್ಧಿಗೆ ಬೇಕಾದ ಕಚ್ಚಾ ಸಾಮಗ್ರಿಗಳನ್ನು ಪಡೆಯಲು ಮತ್ತು ತಮ್ಮ ಸಿದ್ಧ ವಸ್ತುಗಳನ್ನು ಮಾರಲು ಹೊಸ ವಸಾಹತುವನ್ನಾಗಿ ಮಾಡಿಕೊಂಡವು. ಈ ದೇಶ ವಿದೇಶಿಯರ ವಿಲಾಸಿ ಜೀವನದ ಕೇಂದ್ರವಾಯಿತು. ಆರ್ಥಿಕ ದುಃಸ್ಥಿತಿ, ರಾಜಕೀಯ ಅಸ್ಥಿರತೆ, ಕಾರ್ಮಿಕರ ಹಾಗೂ ವಿದ್ಯಾರ್ಥಿಗಳ ಅಶಾಂತಿ ಭುಗಿಲೇಳುತ್ತಿದ್ದವು. ಅಧ್ಯಕ್ಷ ಪಾರ್ಕ್‌ಚಂಗ್‌ಹೀಯ ದಮನಕಾರಿ ಫ್ಯಾಸಿಸ್ಟ್ ಆಳ್ವಿಕೆಯನ್ನು ಕೊನೆಗಾಣಿಸಿ ಪ್ರಜಾಪ್ರಭುತ್ವವನ್ನು ಪುನಃ ಸ್ಥಾಪಿಸಲು ಜನತಾ ಹೋರಾಟಗಳು ತೀವ್ರವಾಗುತ್ತಿದ್ದವು.

ಪಾರ್ಕ್ ಪತನ:

18 ವರ್ಷಗಳ ಪಾರ್ಕ್ ಆಡಳಿತದ ಆಧಾರವೆಂದರೆ, ಅವನ ದೊಡ್ಡ ಮಿಲಿಟರಿ ಮತ್ತು ಅರೆಮಿಲಿಟರಿ ಪಡೆಗಳು ಮತ್ತು ಅಮೇರಿಕ ಸಾಮ್ರಾಜ್ಯಶಾಹಿಗಳು ಹಾಗೂ ಜಪಾನಿ ಏಕಸ್ವಾಮ್ಯ ಬಂಡವಾಳಶಾಹಿಗಳು. ಈ ದೀರ್ಘಾವಧಿಯಲ್ಲಿ ಪಾರ್ಕ್‌ನ ಆಡಳಿತವು ಪ್ರಜಾಪ್ರಭುತ್ವ ಮತ್ತು ಕಮ್ಯುನಿಸ್ಟ್ ವಿರೋಧಿಯಾಗಿತ್ತು; ದುರಾಸೆ, ಭ್ರಷ್ಟಾಚಾರ, ಅವಹೇಳನಗಳಿಗೊಳಗಾಗಿತ್ತು; ಮಿಲಿಟರಿ ಅಧಿಕಾರಿಗಳ ನಿರಂಕುಶ ನಿರ್ದಯ ಆಡಳಿತವಾಗಿತ್ತು. ಅಮೇರಿಕ ಸಾಮ್ರಾಜ್ಯಶಾಹಿಗಳು ಮತ್ತು ಜಪಾನಿ ಏಕಸ್ವಾಮ್ಯ ಬಂಡವಾಳಶಾಹಿಗಳು ತಮ್ಮ ಮಿಲಿಟರಿ, ಸೈದ್ಧಾಂತಿಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಲು ಪಾರ್ಕ್ ನೇತೃತ್ವದ ಫ್ಯಾಸಿಸ್ಟ್ ಮಿಲಿಟರಿ ಆಡಳಿತವನ್ನು ಉಳಿಸಲು ಸರ್ವಪ್ರಯತ್ನ ಮಾಡಿದವು. ಆದರೆ, 1979ರ ಆಗೋಸ್ಟ್-ಅಕ್ಟೋಬರ್ ಕಾಲದಲ್ಲಿ ಪಾರ್ಕ್‌ನ ಆಡಳಿತದ ವಿರುದ್ಧ ಪ್ರಬಲ ಹಾಗೂ ಅಭೂತಪೂರ್ವವಾದ ಆಂದೋಳನ ನಡೆದಾಗ, ದೇಶಾದ್ಯಂತ ಅದು ಆವರಿಸಿದಾಗ, ಪಾರ್ಕ್‌ನ ಆಡಳಿತದ ಬುಡ ಅಲುಗಲಾರಂಭಿಸಿತು. ಪಾರ್ಕ್‌ನ ಆಡಳಿತ ಜನಪ್ರಿಯತೆಯನ್ನು ಕಳೆದುಕೊಳ್ಳುತ್ತಿರುವುದು ಅಮೇರಿಕ-ಜಪಾನಿ ಆಳುವ ವರ್ತುಲಗಳಿಗೂ, ಕಮ್ಯುನಿಸ್ಟ್ ವಿರೋಧಿಗಳಿಗೂ, ಪಾರ್ಕ್ ಪರವಾಗಿರುವವರಿಗೂ ಸ್ಪಷ್ಟವಾಗುತ್ತಾ ಬಂತು. ಪರಿಸ್ಥಿತಿಯು ಕೈಮೀರುವುದರೊಳಗೇ ಮಿಲಿಟರಿಯ ಒಂದು ಭಾಗ ಪಾರ್ಕ್‌ನನ್ನು ಮುಗಿಸಿ ಅಧಿಕಾರವನ್ನು ತನ್ನ ಕೈವಶಮಾಡಿಕೊಂಡಿತು. ದ. ಕೊರಿಯಾದ ಗೂಢಚರ್ಯಾ ನಿರ್ದೇಶಕನಾದ ಕಿಂ ಜೇಕ್ಯೂ, ಮತ್ತು ಲಷ್ಕರಿಶಾಸನದ ಕಮಾಂಡರ್ ಆದ ಚುಂಗ್ ಸಂಗ್ ಹ್ವಾ ಈ ಕ್ಷಿಪ್ರಕ್ರಾಂತಿಯ ನೇತೃತ್ವ ವಹಿಸಿದ್ದರು.

ಆದರೆ, ಕಿಂ ಜೇ ಕ್ಯೂ, ಮತ್ತವನ ಸಹಪಿತೂರಿಗಾರರು ಅಧ್ಯಕ್ಷ ಪಾರ್ಕ್‌ನನ್ನು ಕೊಲೆಮಾಡಿ ಅಧಿಕಾರ ಗಿಟ್ಟಿಸಿಕೊಂಡರೂ, ದೇಶದ ಆಡಳಿತವನ್ನು ಬಲಿಷ್ಠ ಮಿಲಿಟರಿ ತಂಡದ ಬಿಗಿಮುಷ್ಟಿಯಿಂದ ತಪ್ಪಿಸಲು ಅಶಕ್ತರಾದರು. ಪಾರ್ಕ್‌ನ ಕೊಲೆ ಫ್ಯಾಸಿಸ್ಟ್-ಮಿಲಿಟರಿ ಆಳ್ವಿಕೆಯನ್ನು ಕೊನೆಗಾಣಿಸಬೇಕೆಂದಲ್ಲ. ಬದಲು ಮಿಲಿಟರಿ ಅಧಿಕಾರಿಗಳೊಳಗೇ ಅಧಿಕಾರ ಅಂತಸ್ತುಗಳನ್ನು ಮರುವಿತರಣೆ ಮಾಡಿಕೊಳ್ಳುವುದೇ ಉದ್ದೇಶವಾಗಿತ್ತು. ಕಳೆದ ಆರು ತಿಂಗಳುಗಳಿಂದ ಮಿಲಿಟರಿ ಅಧಿಕಾರಿಗಳೊಳಗೇ ತೀವ್ರ ಒಳಜಗಳಗಳು ನಡೆಯುತ್ತಿವೆ. ಅಮೇರಿಕ-ಜಪಾನಿ ಆಳುವ ವರ್ತುಲಗಳಲ್ಲಿ ನಿರೀಕ್ಷಿಸಿದಂತೆ, ಶಾಂತಿಮಾರ್ಗದಲ್ಲಿ ಪ್ರಜಾಸತ್ತೆಗೆ ದ. ಕೊರಿಯ ಸಾಗುವ ಊಹಾಪೋಹಗಳು ಸುಳ್ಳಾಗುತ್ತಿವೆ. ಪಾರ್ಕ್ ಪತನದ ನಂತರ ಈ ದೇಶದ ಮತ್ತು ಅಮೇರಿಕದೊಂದಿನ ಮಿಲಿಟರಿ ಸಂಬಂಧ ಸಡಿಲವಾಗಲೂ ಇಲ್ಲ. ಜಂಟಿ ಮಿಲಿಟರಿ ಕಾರ್ಯಾಚರಣೆಗಳು ನಡೆಯುತ್ತಲೇ ಇವೆ.

ಪ್ರಜಾಸತ್ತಾತ್ಮಕ ಪ್ರಬಲ ಹೋರಾಟ:

ಪಾರ್ಕ್ ನಿರ್ಗಮನದಿಂದ ದ. ಕೊರಿಯಾದಲ್ಲಿ ಪ್ರಜಾಸತ್ತಾತ್ಮಕ ಆಂದೋಳನ ಕ್ಷೀಣಿಸಲಿಲ್ಲ. ಬದಲು, ಅದು ಇನ್ನಷ್ಟು ಬಲಗೊಂಡಿತು, ತೀವ್ರವಾಯಿತು. ಪ್ರಜಾಸತ್ತಾತ್ಮಕ ಶಕ್ತಿಗಳು ಮಿಲಿಟರಿ ಆಡಳಿತವನ್ನು ಮುಖಾಮುಖಿಯಾಗಿ ಎದುರಿಸಲು ಶಕ್ತವಾದವು. ಕಳೆದ ಆರು ತಿಂಗಳುಗಳಲ್ಲಿ ಅನೇಕ ಪ್ರಜಾಸತ್ತಾತ್ಮಕ ಹೋರಾಟಗಳು ನಡೆದವು. ವಿಶ್ವವಿದ್ಯಾನಿಲಯದ ಒಳಗೂ ಹೊರಗೂ ಹೋರಾಟಗಳು ತೀವ್ರಗೊಂಡವು. ವಿದ್ಯಾರ್ಥಿಗಳೂ ತೀವ್ರಗಾಮಿ ಕಾರ್ಮಿಕರೂ ಬಹುಸಂಖ್ಯೆಯಲ್ಲಿ ಇಂತಹ ಹೋರಾಟಗಳಲ್ಲಿ ಭಾಗವಹಿಸಿದರು. ಕಾರಣ ಪಾರ್ಕ್‌ನ ಆಡಳಿತಾವಧಿಯಲ್ಲಿ ಕಾರ್ಮಿಕರು ಅಮಾನುಷವಾದ ಶೋಷಣೆಗೊಳಗಾಗಿದ್ದರು. ಮಿಲಿಟರಿ ಅಧಿಕಾರಹೋಗಿ ನಾಗರೀಕ ಸರಕಾರ ಸ್ಥಾಪನೆಯಾಗಬೇಕು, ತುರ್ತುಪರಿಸ್ಥಿತಿಯ ಎಲ್ಲಾ ಶಾಸನಗಳನ್ನೂ ಆದೇಶಗಳನ್ನೂ ಲಷ್ಕರಿಶಾಸನವನ್ನೂ ರದ್ದು ಮಾಡಬೇಕು, ರಾಜಕೀಯ ಕೈದಿಗಳನ್ನು ಬಿಡುಗಡೆಮಾಡಬೇಕು, ಕಾರ್ಮಿಕ ಸಂಘಗಳನ್ನು ರಚಿಸಲು ಅನಿರ್ಬಂಧಿತ ಹಕ್ಕುಗಳಿರಬೇಕು, ಆದಷ್ಟು ಬೇಗನೇ ಸಾರ್ವತ್ರಿಕ ಚುನಾವಣೆ ನಡೆಸಬೇಕು, ಹೊಸ ಸಂವಿಧಾನ ರೂಪಿಸಬೇಕು, ಇತ್ಯಾದಿಗಳು ಹೋರಾಟಗಾರರ ಮುಖ್ಯ ಬೇಡಿಕೆಗಳು.

ಪ್ರಜಾಸತ್ತಾತ್ಮಕ ಹೋರಾಟದ ಒತ್ತಡದಿಂದಾಗಿ ಉಸ್ತುವಾರಿ ಸರಕಾರದ ಅಧ್ಯಕ್ಷನಾದ, ಮಿಲಿಟರಿ ಆಡಳಿತದ ಕೈಗೊಂಬೆಯಾದ ಚೋಯಿ ಕ್ಯೂ ಹಾನ್ ಕೆಲವೊಂದು ರಿಯಾಯಿತಿಗಳನ್ನು ನೀಡಲು ಪ್ರಾರಂಭಿಸಿದನು. ಪರಿಣಾಮವಾಗಿ, ರಾಷ್ಟ್ರೀಯ ಪ್ರಜಾಸತ್ತಾತ್ಮಕ ಪಕ್ಷದ ಜನಪ್ರಿಯ ನಾಯಕ ಕಿಂ ಡೇ ಜಂಗ್ ಸೇರಿದಂತೆ ಅನೇಕ ಪ್ರಮುಖ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಲಾಯಿತು. ವಿದ್ಯಾರ್ಥಿಗಳ ಮುಖಂಡರನ್ನೂ ಜೈಲಿನಿಂದ ಬಿಡುಗಡೆ ಮಾಡಲಾಯಿತು. ತುರ್ತುಪರಿಸ್ಥಿತಿಯ ಆದೇಶಗಳನ್ನು ಹಿಂತೆಗೆದುಕೊಳ್ಳಲಾಯಿತು. ಆದರೆ, ಮಿಲಿಟರಿ ತಂಡ ಇಂತಹ ಉದಾರ ನೀತಿಗೆ ತನ್ನ ತೀವ್ರ ವಿರೋಧ ವ್ಯಕ್ತಪಡಿಸಿತು. ಪ್ರಜಾಸತ್ತಾತ್ಮಕ ಆಂದೋಳನಕ್ಕೆ ರಿಯಾಯಿತಿಗಳನ್ನಿತ್ತರೆ ತನ್ನ ರಾಜಕೀಯ ಆಡಳಿತಾಧಿಕಾರಕ್ಕೆ ಧಕ್ಕೆ ಬಂದೀತೆಂದು ಮಿಲಿಟರಿ ತಂಡಕ್ಕೆ ಭಯ.

ಇನ್ನೊಂದು ಮಿಲಿಟರಿ ಕ್ಷಿಪ್ರಕ್ರಾಂತಿ:

ಪ್ರಜಾಸತ್ತಾತ್ಮಕ ಹೋರಾಟವು ಪ್ರಬಲವಾಗುತ್ತಿದ್ದಂತೆಯೇ ಭದ್ರತಾ ಕಮಾಂಡರ್ ಜನರಲ್ ಚಾನ್ ತೂ ಹಾನ್ ಮಿಂಚಿನ ವೇಗದಲ್ಲಿ ದ. ಕೊರಿಯಾದಲ್ಲಿ ಮೇ ತಿಂಗಳ 17ರಂದು ದೇಶಾದ್ಯಂತ ಲಷ್ಕರಿ ಶಾಸನವನ್ನು ಪುನಃ ಜಾರಿಗೊಳಿಸಿದನು. ಅವನ ನೇತೃತ್ವದ ಹೊಸ ಮಿಲಿಟರಿ ಆಡಳಿತವು ರಾಜಕೀಯ ಚಟುವಟಿಕೆಗಳನ್ನು ನಿಶೇಧಿಸಿತು. ಕಾಲೇಜುಗಳನ್ನೂ ವಿಶ್ವವಿದ್ಯಾನಿಲಯಗಳನ್ನೂ ಮುಚ್ಚಿತು. ಸರಕಾರದ ಪರ ಹಾಗೂ ವಿರೋಧವಾಗಿರುವ ಸಾವಿರಾರು ರಾಜಕೀಯ ಧುರೀಣರನ್ನೂ, ವಿದ್ಯಾರ್ಥಿ ಹಾಗೂ ಕಾರ್ಮಿಕಮುಖಂಡರನ್ನೂ ಬಂಧಿಸಿತು. ಮುಂದಿನ ಅಧ್ಯಕ್ಷ ಸ್ಥಾನಕ್ಕೆ ನಡೆಯಲಿರುವ ಚುನಾವಣೆಯಲ್ಲಿ ಸ್ಪರ್ಧಿಸಬಹುದೆಂಬ ಅನುಮಾನದಿಂದ ಕಿಂ ಡೇ

(6ನೇ ಪುಟ ನೋಡಿ)

ಆಧುನಿಕ ರಾಜಕೀಯ ಬೆಳವಣಿಗೆಯಲ್ಲಿ ಜಾತಿ, ವರ್ಗ ಮತ್ತು ಪಕ್ಷಗಳು

ಇ. ಎಂ. ಎಸ್. ನಂಬೂದಿರಿಪಾದ್

(ಹಿಂದಿನ ಸಂಚಿಕೆಯಿಂದ)

ಜ್ಯೂಯಿಷರು, ಕ್ರೈಸ್ತರು ಮತ್ತು ಮುಸಲ್ಮಾನ ವ್ಯಾಪಾರಿಗಳು ದಕ್ಷಿಣ ಭಾರತದ ಸಮುದ್ರ ತೀರಗಳಲ್ಲಿ ಬಂದು ನೆಲಸಿದಾಗ ಮತ್ತು ಮುಸಲ್ಮಾನ ದೊರೆಗಳು ಮತ್ತು ಸೈನಿಕರು ಉತ್ತರ ಭಾರತವನ್ನು ಆಕ್ರಮಿಸಿದಾಗ ಒಂದು ಹೊಸ ಸಂಕೀರ್ಣ ಅಂಶ ಪ್ರಾರಂಭವಾಯಿತು ಎಂಬುದರಲ್ಲಿ ಅನುಮಾನವಿಲ್ಲ. ಹಿಂದೂ ಪವಿತ್ರ ಗ್ರಂಥಗಳಲ್ಲಿ ನೇಮಕವಾದ ಜಾತಿ ವ್ಯವಸ್ಥೆಯೊಳಗೆ ಈ ಹಿಂದೂಗಳಲ್ಲದ ಧಾರ್ಮಿಕ ಗುಂಪುಗಳನ್ನು ಸೇರಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಆದರೆ ಈ ಹೊಸ ಸಾಮಾಜಿಕ ಗುಂಪುಗಳು ಭಾರತೀಯ ಸಮಾಜದೊಳಗೆ ಬೆರೆತುಕೊಂಡು ಹಿಂದೂಗಳಿಗಿಂತ ಭಿನ್ನವಾದ ಭಾರತೀಯ ಪ್ರಜೆಗಳಾಗಿ ನೆಲೆಗೊಂಡರು, ಇದರ ಅನಿವಾರ್ಯ ಪರಿಣಾಮವೆಂದರೆ- ಎಲ್ಲಾ ಪ್ರಾಯೋಗಿಕ ಉದ್ದೇಶಗಳಿಗೆ ಈ ಹಿಂದೂಗಳಲ್ಲದ ಗುಂಪುಗಳು ಹೊಸ ಜಾತಿಗಳಾದವು. ಆದ್ದರಿಂದಲೇ ಉತ್ತರ ಭಾರತದ ಇಸ್ಲಾಂ ಅಧಿಪತಿಗಳು ಮತ್ತು ದೊರೆಗಳು, (ದಕ್ಷಿಣ ಭಾರತದ ಜ್ಯೂಯಿಷರು, ಕ್ರೈಸ್ತರು ಮತ್ತು ಮುಸಲ್ಮಾನ ವ್ಯಾಪಾರಿಗಳನ್ನು ಬಿಟ್ಟು) ಎಲ್ಲಾ ಜಾತಿ ಮತ್ತು ಗುಂಪುಗಳ ಗಡಿಗಳನ್ನು ಮೀರಿದ ಭಾರತೀಯ ಸಂಸ್ಕೃತಿಗೆ ಪೋಷಕರಾದರು. ಬೇರೆ ಮಾತಲ್ಲಿ ಹೇಳುವುದಾದರೆ, ಹಿಂದೂಗಳಲ್ಲದ ಧಾರ್ಮಿಕ ಗುಂಪುಗಳ ಮೇಲ್ವರ್ಗಕ್ಕೆ ಸೇರಿದವರು ಮತ್ತು ಹಿಂದೂ ಸಮಾಜದಲ್ಲಿ ವಿರಾಮವಾಗಿದ್ದ ಮೇಲ್ವರ್ಗದ ಜನ ಇಬ್ಬರೂ ಸೇರಿ ಭಾರತದ ನಿಜವಾದ ನವ ನಾಗರಿಕತೆಯನ್ನು ಸೃಷ್ಟಿ ಮಾಡಿದರು.

ಪರ ಮತ್ತು ವಿರೋಧ ಅಂಶಗಳು:

ಹೀಗೆ ಭಾರತದಲ್ಲಿ ಜಾತಿ ಸಂಸ್ಥೆಯು ಪರ ಮತ್ತು ವಿರುದ್ಧಾಂಶಗಳೆರಡನ್ನೂ ಪಡೆದಿವೆ. ಇದರ ಸುಲಭವಾಗಿ ಹೊಂದಿಕೊಳ್ಳುವಂತಹ ಗುಣದಿಂದ ಯುರೋಪಿನಲ್ಲಿ ಪ್ರಾಚೀನ ಸಮತಾವಾದದಿಂದ ಗುಲಾಮಪದ್ಧತಿಗೆ ಬಂದ ಮತ್ತು ಗುಲಾಮ ಪದ್ಧತಿ ಊಳಿಗಮಾನ್ಯ ಸ್ಥಿತಿಗೆ ಎಡೆಮಾಡಿಕೊಟ್ಟ ಎರಡೂ ಕ್ರಾಂತಿಗಳಿಗೂ ಹೊಂದಿಕೊಳ್ಳುವುದು ಸಾಧ್ಯವಾಯಿತು. ಈ ಹೊಸ್ತನ ಗುಣದಿಂದ ಶತಮಾನಗಳವರೆಗೆ ಇದು ಭಾರತೀಯ ಸಮಾಜದ ಭಾಗವಾಗಿ ಮುಂದುವರೆಯಿತು.

ವಿರುದ್ಧವಾದ ಅಂಶವೆಂದರೆ ಇದು ಸಮಾಜವನ್ನು ನಿಂತ ಕಡೆ ಕೊಳೆಯುವಂತೆ ಮಾಡಿತು. ಜಾತಿ ವ್ಯವಸ್ಥೆಯಲ್ಲಿ ಹೂತುಹೋಗಿದ್ದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಜೀವನದ ಸ್ಥಗಿತವಾದ ನಿರಂತರತೆಯಿಂದ ಉತ್ಸಾಹ ಮತ್ತು ಬದಲಾವಣೆಗಳು ಇಲ್ಲದೆ ಹೋದವು. ಇದರಿಂದ ಯುರೋಪು ಊಳಿಗಮಾನ್ಯ ಸ್ಥಿತಿಯಿಂದ ಬಂಡವಾಳಶಾಹಿ ಸ್ಥಿತಿಗೆ ಬದಲಾವಣೆಯನ್ನು ಪಡೆದಾಗ-ಭಾರತ ತನ್ನ ಜಾತಿ ವ್ಯವಸ್ಥೆಯೊಳಗೆ ಇದ್ದುದರಿಂದ ಆರೀತಿ ಬದಲಾಗಲು ಸಾಧ್ಯವಾಗಲಿಲ್ಲ. ಯುರೋಪಿನಲ್ಲಿ ಗುಲಾಮಗಿರಿ ಮತ್ತು ಊಳಿಗಮಾನ್ಯ ಯುಗಗಳಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಮುನ್ನಡೆ ಆದ ಹಾಗೆಯೇ ಇಲ್ಲಿಯೂ ಅಂಥ ಮುನ್ನಡೆ ಆಗುವುದನ್ನು ಜಾತಿ ವ್ಯವಸ್ಥೆ ಮತ್ತು ಜಾತಿ ಪ್ರಜ್ಞೆಗಳು ತಡೆಯಲಿಲ್ಲ. ಆದರೆ ಯುರೋಪಿನಲ್ಲಿ ಪುನರುತ್ಥಾನ, ಕೈಗಾರಿಕಾಕ್ರಾಂತಿ ಇವುಗಳು ನಡೆದು ಯಂತ್ರ ಯುಗದ ಆರಂಭ ಎಡೆಮಾಡಿದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಶಕ್ತಿಗಳು ಇಲ್ಲಿ ಉದಯವಾಗುವುದನ್ನು ಜಾತಿ ವ್ಯವಸ್ಥೆಯ ಜಡತೆ ತಡೆ ಹಿಡಿಯಿತು.

ಜಾತಿ, ಉಪಜಾತಿಗಳ ಆಧಾರದ ಮೇಲೆ ನಿಂತ ಸಾಮಾಜಿಕ ವ್ಯವಸ್ಥೆಯ ತಿರುಳೆಂದರೆ ತಲೆತಲಾಂತರದವರೆಗೆ ಒಂದೇ ರೀತಿಯ ಕೆಲಸ ಪುನರಾವರ್ತನೆಯಾಗುವುದು. ಪ್ರತಿ ವ್ಯಕ್ತಿಯೂ ತನ್ನ ಜಾತಿಗೆ ನಿರ್ದಿಷ್ಟವಾದ ಕೆಲಸವನ್ನೇ ಮಾಡುವುದು. ಆದ್ದರಿಂದ ಇಲ್ಲಿ ತಾಂತ್ರಿಕ ಬೆಳವಣಿಗೆಯ ಮುಖ್ಯ ತಿರುಳಾದ ಹೊಸ ಮಾರ್ಪಾಡಿಗೆ ಅವಕಾಶವೇ ಇರಲ್ಲಿಲ್ಲ. ಇವೆಲ್ಲಕ್ಕಿಂತ ಮಿಗಿಲಾಗಿ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿಯಲ್ಲದೆ ಗ್ರಾಮೀಣ ಸಮೂಹ ಮತ್ತು ಅವಿಭಕ್ತ ಕುಟುಂಬಗಳೇ ಎರಡು ಆಧಾರ ಸ್ಥಂಭಗಳಾಗಿರುವಾಗ ಇದು ಇನ್ನೂ ನಿಜವಾಗುತ್ತದೆ. ಜಾತಿ, ಗ್ರಾಮೀಣ ಸಮೂಹ ಮತ್ತು ಅವಿಭಕ್ತ ಕುಟುಂಬ ಈ ಮೂರೂ ಇಡೀ ಸಾಮಾಜಿಕ-ಆರ್ಥಿಕ ರಚನೆಯನ್ನು ರೂಪಿಸಿರುತ್ತವೆ. ಪ್ರಾಚೀನ ಬಣ ಸಮಾಜದ ಅಡೆತಡೆಗಳು ಮತ್ತು ಜಡತೆಗಳನ್ನು ಈ ಮೂರು ಸ್ತಂಭಗಳ ರಚನೆ ಒಡೆಯಲು ಶಕ್ತವಾಯಿತು. ಗುಲಾಮಗಿರಿ ಮತ್ತು ಊಳಿಗಮಾನ್ಯ ಪದ್ಧತಿಯಲ್ಲಿ ಯುರೋಪು ಸಾಧಿಸಿದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಮುನ್ನಡೆಗಳು ಭಾರತದಲ್ಲೂ ಆಗುವಂತೆ ಇದು ಸಾಧ್ಯಮಾಡಿತು. ಆದರೆ ಬಂಡವಾಳಶಾಹಿ ಪದ್ಧತಿಯಲ್ಲಿ ಯುರೋಪು ಕಂಡ ಮುನ್ನಡೆಗಳು ಭಾರತದಲ್ಲಿ ಆಗದಂತೆ ಮಾತ್ರ ಇದು ತಡೆಯಿತು.

ಭಾರತವು ಯುರೋಪಿನ ನಾಗರೀಕತೆಗಿಂತ ಹೆಚ್ಚಿನದಲ್ಲದಿದ್ದರೂ ಅದಕ್ಕೆ ಸಮಾನವಾದ ಸ್ಥಾನವನ್ನು ಪಡೆದಿದ್ದ ಮಾನವ ಚರಿತ್ರೆಯ ಪ್ರಾಚೀನ ಮತ್ತು ಮಧ್ಯಕಾಲೀನ ಯುಗದಲ್ಲಿ ಜಾತಿ ವ್ಯವಸ್ಥೆಯು ಅಂಥ ವಿರುದ್ಧವಾದ ಪರಿಣಾಮವನ್ನೇನೂ ಮಾಡಲಿಲ್ಲ. ಆದರೂ ಅದು ಆಧುನಿಕ ಯುರೋಪಿನ ಸಾಮಾಜಿಕ, ಆರ್ಥಿಕ ಸಾಂಸ್ಕೃತಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಬೆಳವಣಿಗೆ ಸಾಧಿಸಿದ ತಾಂತ್ರಿಕತೆ ಮತ್ತು ಉತ್ಪಾದನೆಯ ಬದಲಾವಣೆಗಳನ್ನು ಪಡೆಯದಂತೆ ಮಾಡಿತು. ಯುರೋಪಿನ ಮಧ್ಯಕಾಲದಲ್ಲಿ ನಡೆದ ಕ್ರಾಂತಿ ಸರಣಿ ಯಾವ ರೀತಿಯಲ್ಲಿ ಯುರೋಪಿಗೆ ಹೊಸತನವನ್ನು ಕೊಟ್ಟಿತೋ ಅಂಥದ್ದು ಭಾರತದಲ್ಲಿ ನಡೆಯದಿರುವುದಕ್ಕೆ ಕಾರಣವೆಂದರೆ ಜಾತಿ, ಗ್ರಾಮೀಣ ಸಮಾಜ ಮತ್ತು ಅವಿಭಕ್ತ ಕುಟುಂಬ, ಇವುಗಳಿಂದುಂಟಾದ ಜಡತೆ. ಭಾರತೀಯ ಸಮಾಜದ ಕ್ರಾಂತಿಕಾರೀ ಬದಲಾವಣೆಯಾಗಬೇಕಾದರೆ, ಪ್ರಾಚೀನ ಬಣ ಸಮಾಜದ ಸ್ಥಾನದಲ್ಲಿ ಬಂದ ಈ ಶತಮಾನಗಳಷ್ಟು ಹಳೆಯದಾದ ಸಾಮಾಜಿಕ ವ್ಯವಸ್ಥೆ ಅಗತ್ಯವಾಗಿ ನಾಶವಾಗಬೇಕಿತ್ತು. ಆದರೆ ಇದು ಹಾಗೇ ಉಳಿದುಕೊಂಡಿತು. ಏಕೆಂದರೆ ಈ ಮೂರು ರೀತಿಯ ಸಂಸ್ಥೆಗಳು ಕಿತ್ತುಹಾಕಲು ಸಾಧ್ಯವಾಗದಷ್ಟು ಆಳವಾಗಿ ಬೇರು ಬಿಟ್ಟಿದ್ದವು.

ಇಂಥ ಸ್ಥಿತಿಯಲ್ಲಿದ್ದ ಭಾರತಕ್ಕೆ ವಿದೇಶಿ ಬಂಡವಾಳಶಾಹಿಯ ಪ್ರತಿನಿಧಿಗಳು ಮೊದಲು ವ್ಯಾಪಾರೀ ಉದ್ದಿಮೆದಾರರಾಗಿ ಬಂದರು. ಅನಂತರ ಊಳಿಗಮಾನ್ಯ ದೊರೆಗಳ ನಡುವೆ ನಿರಂತರವಾಗಿ ನಡೆಯುತ್ತಿದ್ದ ಯುದ್ಧಗಳಲ್ಲಿ ಭಾಗವಹಿಸಿದರು. ಕೊನೆಗೆ ತಾವೇ ಸರ್ವಾಧಿಕಾರಿಗಳಾದರು. ಪೋರ್ಚುಗೀಸ್, ಡಚ್, ಫ್ರೆಂಚ್ ಮತ್ತು ಬ್ರಿಟಿಷರ ಕಂಪನಿಗಳು ಹೇಗೆ ಒಬ್ಬೊಬ್ಬರಾಗಿ ಒಂದಲ್ಲ ಒಂದು ರಾಜನ ಹತ್ತಿರ ವ್ಯವಹಾರ ನಡೆಸಲು ಪ್ರಯತ್ನಿಸಿದರು, ಭಾರತ ಮತ್ತು ವಿದೇಶದ ತಮ್ಮ ಶತ್ರುಗಳ ವಿರುದ್ಧ ಸೆಣಸುವುದಕ್ಕೆ ಒಬ್ಬನಲ್ಲ ಒಬ್ಬ ರಾಜನ ಹತ್ತಿರ ಹೇಗೆ ಮೈತ್ರಿ ಸಾಧಿಸಲು ಪ್ರಯತ್ನಿಸಿದರು, ಕೊನೆಗೆ ಬ್ರಿಟಿಷರು ಫ್ರೆಂಚರಿಗೆ ಪೋರ್ಚುಗೀಸರಿಗೆ ಸ್ವಲ್ಪ ಪ್ರದೇಶಗಳನ್ನು ಕೊಟ್ಟು ಇಡೀ ದೇಶವನ್ನೇ ಹೇಗೆ ಆಕ್ರಮಿಸಿಕೊಂಡರು (ಡಚ್ಚರು ಭಾರತದ ಬದಲು ಇಂಡೋನೇಷಿಯವನ್ನು ಆರಿಸಿಕೊಂಡು ಪೂರ್ಣವಾಗಿ ಇಲ್ಲಿಂದ ಹೊರಬಿದ್ದರು) ಮುಂತಾದುವನ್ನು ಇಲ್ಲಿ ವಿವರಿಸುವುದು ಅಗತ್ಯವೂ ಅಲ್ಲ, ಉಚಿತವೂ ಅಲ್ಲ. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ ಯುರೋಪಿನ ಬಂಡವಾಳಶಾಹೀ ಪದ್ಧತಿಯ ರಾಜಕೀಯ, ಆರ್ಥಿಕ ಮತ್ತು ಸೈನಿಕ ವಿಧಾನಗಳ ಪ್ರವೇಶದಿಂದ ಜಾತಿ, ಗ್ರಾಮೀಣ ಸಮೂಹ ಮತ್ತು ಅವಿಭಕ್ತ ಕುಟುಂಬ ಈ ಮೂರರ ಮೇಲೆ ನಿಂತಿದ್ದ ಶತಮಾನಗಟ್ಟಲೆ ಹಳೆಯದಾದ ಭಾರತೀಯ ನಾಗರಿಕತೆ ಬದಲಾಯಿತು ಎಂಬುದು ಮಾತ್ರ.

ಹೊರಗಿನ ಕ್ರಾಂತಿ ಮತ್ತು ಅದರ ಇತಿಮಿತಿಗಳು :

ಇದು ಸುಲಭವಾಗಿ ಒಂದು ಕ್ಷಣಕ್ಕೆ ನಡೆದು ಹೋಗಲಿಲ್ಲ. ಈವತ್ತಿಗೂ ಕೂಡ ವಿದೇಶಿ ಬಂಡವಾಳಶಾಹಿಯ ಮುನ್ಸೂಚಕ ಭಾರತದ ಮಣ್ಣಿನ ಮೇಲೆ ಕಾಲಿಟ್ಟಿತೋ ಐದು ಶತಮಾನಗಳ ನಂತರವೂ ಕೂಡ (1948ರಲ್ಲಿ ವಾಸ್ಕೋಡಿಗಾಮ ಕಲ್ಲಿಕೋಟೆಗೆ ಬಂದದ್ದು) ಈ ಮೂರು ಸಂಸ್ಥೆಗಳು ಮತ್ತು ಅವುಗಳ ಜಾಗದಲ್ಲಿ ಆಧುನಿಕ ಬೂರ್ಶ್ವಾ ಸಾಮಾಜಿಕ ವ್ಯವಸ್ಥೆ ಬಂದಿಲ್ಲ. ಈ ಲೇಖನದ ಪ್ರಾರಂಭದಲ್ಲಿ ಸೂಚಿಸಿದ ಹಾಗೆ, ಆಧುನಿಕ ರಾಜಕೀಯ ಬೆಳವಣಿಗೆಯ ಮೇಲೆ ಜಾತಿವ್ಯವಸ್ಥೆ ಮಾಡಿರುವ ಪ್ರಭಾವವು ಈ ವಾಸ್ತವತೆಯನ್ನು ಸ್ಪಷ್ಟಪಡಿಸುತ್ತದೆ.

ಭಾರತ ಮತ್ತು ಯುರೋಪ್ ದೇಶಗಳ ನಡುವೆ ವ್ಯಾಪಾರ ವಿಸ್ತರಣೆ ಆದದ್ದು ಭಾರತದ ತೀರ ಹಳೆಯ ರೀತಿಯ ಸಾಮಾಜಿಕ ಪದ್ಧತಿಯ ಮೂಲವನ್ನೇ ನಾಶಪಡಿಸಿತು ಎಂಬುದು ನಿರ್ವಿವಾದ. ಭಾರತೀಯ ಇತಿಹಾಸದ ಪ್ರಾಚೀನ ಮತ್ತು ಮಧ್ಯಕಾಲೀನ ಯುಗಗಳಲ್ಲಿ ಇದ್ದ ಹಾಗೆ ಭಾರತದ ಹಳ್ಳಿಗಳು ಈಗ ರಾಜಕೀಯ ಸಾಮಾಜಿಕ ಮತ್ತು ಆರ್ಥಿಕ ಸ್ವಾವಲಂಬನೆಯ ಸಂಪೂರ್ಣತೆಯನ್ನು ಉಳಿಸಿಕೊಳ್ಳಲಾಗಲಿಲ್ಲ. ಜಾತಿ ಮತ್ತು ಉಪಜಾತಿಗಳ ನಡುವೆ ದುಡಿಮೆಯ ವಿತರಣೆ ಅಷ್ಟೊಂದು ಪವಿತ್ರವೆನ್ನಿಸುವಂತೆ ಉಳಿಯಲಿಲ್ಲ. ವಿದ್ಯಾಭ್ಯಾಸ, ರಾಜಕೀಯ ಮತ್ತು ಸಂಸ್ಕೃತಿಯ ತಳಹದಿಯಾದ ಸಾಮಾಜಿಕ ಸಂಸ್ಥೆಯಾಗಿ ಅವಿಭಕ್ತ ಕುಟುಂಬಗಳು ಉಳಿಯಲಿಲ್ಲ. ಭಾರತದ ಪ್ರತಿ ಹಳ್ಳಿಯೂ ಕಾಲಕ್ರಮೇಣ ಜಗತ್ತಿನ ಮಾರುಕಟ್ಟೆಯಲ್ಲಿ ಭಾಗವಹಿಸುವಂತಾಯಿತು. ಪ್ರತಿ ಕುಟುಂಬ, ವೈಯಕ್ತಿಕ ಗ್ರಾಹಕ ಸಹ ಜಗತ್ತಿನ ಮಾರುಕಟ್ಟೆಯ ಚಕ್ರದ ಕಡ್ಡಿಗಳಾಗುವಂತಾಗಿ, ವಿದೇಶಗಳಲ್ಲಿ ಮಾರಾಟವಾಗಲು ಉತ್ಪಾದಿಸುವುದು ಮತ್ತು ಜಗತ್ತಿನ ಮಾರುಕಟ್ಟೆಯ ಉತ್ಪನ್ನಗಳನ್ನು ಕೊಳ್ಳುವುದು ಇವು ಅತಿ ಹೆಚ್ಚಾದುವು. ಪ್ರಾಚೀನ ಮತ್ತು ಮಧ್ಯಕಾಲೀನ ಯುಗದಲ್ಲಿ ಒಂದು ನಿರ್ದಿಷ್ಟವಾದ ಜಾತಿ ಅಥವಾ ಉಪಜಾತಿಗೆ ಸೇರಿದ್ದು, ಅದರಿಂದ ಆ ಜಾತಿಗೆ ಮೀಸಲಾದ ಕೆಲಸವನ್ನೇ ಮಾಡುತ್ತಿದ್ದ ವ್ಯಕ್ತಿಯು ಈಗ ಜಗತ್ತಿನ ಮಾರುಕಟ್ಟೆಯಲ್ಲಿ ಭಾಗವಹಿಸುವಂತಾಯಿತು. ಆದ್ದರಿಂದ, ಅವರಿಗೆಲ್ಲ ಈಗ ತಮ್ಮ ಜಾತಿಗಳಿಗೆ ಮೀಸಲಾದ ಕಸುಬನ್ನು ಬಿಟ್ಟು ಬೇರೆಕಡೆ ಉದ್ಯೋಗ ಹುಡುಕುವ ಅವಕಾಶ ಅಥವಾ ಒತ್ತಡ ಬಂದಿತು. ಆದ್ದರಿಂದ ಸಹಜವಾಗಿ, ಒಂದು ನಿರ್ದಿಷ್ಟ ಜಾತಿಗೆ ಮೀಸಲಾದ ದುಡಿಮೆ ಕ್ಷೇತ್ರವು ಇತರ ಜಾತಿಗೆ ಸೇರಿದ ಜನರಿಂದಲೂ ಆಕ್ರಮಣಕ್ಕೊಳಗಾಯಿತು.

ಗ್ರಾಮೀಣ ಸಮೂಹ ಮತ್ತು ಜಾತಿ ಈ ಸಂಸ್ಥೆಗಳು ಇವುಗಳು ಪೂರ್ಣವಾಗಿ ನಾಶವಾಗತೊಡಗಿದಾಗ ಮೂರನೇ ಸಂಸ್ಥೆ (ಅವಿಭಕ್ತ ಕುಟುಂಬ) ಒಡೆಯುವುದಕ್ಕೆ ಹೆಚ್ಚು ಕಾಲ ಬೇಕಾಗಲಿಲ್ಲ. ಪಿತೃಪ್ರಧಾನ ಮತ್ತು ಮಾತೃಪ್ರಧಾನ ಕುಟುಂಬಗಳು ದಶಕಗಳ ಅವಧಿಯಲ್ಲಿ ಬದಲಾಗಿ, ತಂದೆ ತಾಯಿ ಮತ್ತು ಅವರ ಅವಿವಾಹಿತ ಮಕ್ಕಳನ್ನುಳ್ಳ ಆಧುನಿಕ ಕುಟುಂಬ ಪದ್ಧತಿ ಜಾರಿಗೆ ಬಂದಿತು. ಆದ್ದರಿಂದ, ಬ್ರಿಟಿಷ್ ದೊರೆಗಳು ತಂದ ಅಪಾರ ಸಾಮಾಜಿಕ ಬದಲಾವಣೆಗಳು ಮಾತ್ರ "ಭಾರತೀಯ ಇತಿಹಾಸದಲ್ಲಿ ನಡೆದ ಏಕೈಕ ಕ್ರಾಂತಿ" ಎಂದು ಕಾರ್ಲ್‌ಮಾರ್ಕ್ಸನು ವರ್ಣಿಸಿರುವುದು ಪೂರ್ಣವಾಗಿ ಸತ್ಯವಾಗಿದೆ.

ಆದರೆ ಈ "ಕ್ರಾಂತಿ"ಗೆ ತೀವ್ರ ಮಿತಿಗಳು ಇದ್ದವು. ಏಕೆಂದರೆ ವಿದೇಶದಲ್ಲಿ ಆಳುತ್ತಿರುವ ಆಳುವ ವರ್ಗವೊಂದು ತನ್ನ ಉಳಿವಿಗಾಗಿ ಅಗತ್ಯವಾದ ರಾಜಕೀಯ ಮೈತ್ರಿಗಳನ್ನು ಸ್ಥಾಪಿಸಿಕೊಳ್ಳಬೇಕಾಗಿತ್ತು. ಈ ಕ್ರಾಂತಿಯು ಸಂಪೂರ್ಣವಾಗಬೇಕಾದರೆ ಮತ್ತು ನಿಜವಾಗಬೇಕಾದರೆ ಸಮಾಜವನ್ನು ಹಿಡಿತದಲ್ಲಿಟ್ಟುಕೊಂಡಿರುವ ಈ ವರ್ಗಗಳು ಮತ್ತು ಹಂತವು ಪೂರ್ಣವಾಗಿ ನಾಶವಾಗಬೇಕು ಎಂಬುದನ್ನು ಅವರು ಈ ವರ್ಗಗಳ ಪ್ರತಿನಿಧಿಗಳಲ್ಲಿ ಕಂಡುಕೊಂಡರು.

ಪ್ರಾಚೀನ ಭಾರತೀಯ ಸಮಾಜವು ಬಂಡವಾಳಶಾಹಿ ವಿಶ್ವ ಮಾರುಕಟ್ಟೆಯ ಶಕ್ತಿಗಳಿಂದ ಹೊಡೆತತಿಂದು ನಿರ್ನಾಮವಾಗುವಾಗ ಆ ಸಮಾಜದ ಪ್ರತಿನಿಧಿಗಳು ತೀಕ್ಷ್ಣವಾದ ಪ್ರತಿರೋಧವನ್ನು ವ್ಯಕ್ತಪಡಿಸಬೇಕಾಯಿತು,

ಉರುಳಿದ ಚಕ್ರವರ್ತಿಗಳು, ಅಧಿಕಾರ ಕಳೆದುಕೊಂಡಿದ್ದ ಊಳಿಗಮಾನ್ಯ ದೊರೆಗಳು ಪ್ರಾಚೀನ ಮತ್ತು ಮಧ್ಯ ಕಾಲೀನ(ಹಿಂದೂ-ಮುಸ್ಲಿಮ್) ಸಂಸ್ಕೃತಿಯ ನಾಯಕರು ಎಲ್ಲರೂ ಹೊಸ ದೊರೆಗಳಿಗೆ ಉಗ್ರಪ್ರತಿಭಟನೆ ತೋರಿಸಿದರು. ಹಾಗೆಯೇ ಗ್ರಾಮೀಣ ಜನತೆಯೂ ತಮ್ಮ ಜೀವನವಿಧಾನ, ನಂಬಿಕೆಗಳಿಗೆ ಪರಕೀಯ ದೊರೆಗಳಿಂದ ಧಕ್ಕೆ ಒದಗುತ್ತಿದೆಯೆಂದುಕೊಂಡು ಪ್ರತಿಭಟಿಸಿದರು. ಹೀಗೆ ಸ್ಥಳೀಯವಾದ, ಆಕಸ್ಮಿಕವಾದ ಅಲ್ಲದೆ ವಿಶಾಲವಾದ ಮತ್ತು ಸಂಘಟಿತವಾದ ದಂಗೆಗಳ ಸರಣಿಯೇ ದೇಶದಲ್ಲಿ ನಡೆದು ಕೊನೆಗೆ ಸಿಪಾಯಿದಂಗೆ ಮತ್ತು 1857-58ರ ಉತ್ತರ ಭಾರತದ ಜನಪ್ರಿಯ ದಂಗೆಗಳಲ್ಲಿ ಕೊನೆಮುಟ್ಟಿದವು. ಈ ದಂಗೆಗಳಲ್ಲಿ ದಕ್ಷಿಣ ಭಾರತದ ಪಾಲೂ ಇದ್ದವು. ಕೇರಳದಲ್ಲಿ ಮಲಬಾರ್‌ನ ಪಜಸ್ಸಿದಂಗೆ ತಿರುವಾಂಕೂರಿನ ವೇಲುಥಂಪಿ ದಂಗೆ ಮತ್ತು ಕೊಚ್ಚಿಯ ಪಳಿಯಥಾಚನ್ ದಂಗೆಗಳು ನಡೆದವು.

ಈ ದಂಗೆಗಳ ಪ್ರವಾಹ ಮತ್ತು ಅವುಗಳ ಸಾರ್ವತ್ರಿಕ ಸ್ವಭಾವಗಳು ಹೊಸ ಬ್ರಿಟಿಷ್ ದೊರೆಗಳು, ಹಳೆಯ ಭಾರತೀಯ ಸಮಾಜದೊಡನೆ ಕೆಲವು ರಾಜಿಗಳನ್ನು ಮಾಡಿಕೊಳ್ಳುವಂತೆ ಒತ್ತಾಯಿಸಿದವು. 1857ರ ದಂಗೆ ಮತ್ತು ಪ್ರತಿಭಟನೆಯನಂತರ ಆಗಿನ ರಾಣಿ ವಿಕ್ಟೋರಿಯ ನೀಡಿದ ಪ್ರಸಿದ್ಧ ಘೋಷಣೆಯು, ಬ್ರಿಟಿಷರ ಪರವಾಗಿದ್ದ ಭಾರತೀಯ ಸಮಾಜದ ಜಾತಿ ಮತ್ತು ಇತರ ಸಂಸ್ಥೆಗಳ ನಾಯಕರಿಗೆ, ಅವರ ಅಧಿಕಾರ ಮತ್ತು ಸವಲತ್ತುಗಳ ರಕ್ಷಣೆಯ ಬಗ್ಗೆ ಅಗತ್ಯವಾಗಿದ್ದ ಭರವಸೆಯನ್ನು ಕೊಟ್ಟಿತು. ವಾಸ್ತವವಾಗಿ ಆ ಘೋಷಣೆಯು ಏಕಪಕ್ಷೀಯ ಪ್ರಕಟಣೆಯಾಗಿದ್ದು, ಬ್ರಿಟಿಷ್ ದೊರೆಗಳು ಮತ್ತು ಭಾರತದ ಹಳೆಯ ಸಾಮಾಜಿಕ ವ್ಯವಸ್ಥೆಯ ಪ್ರತಿನಿಧಿಗಳ ನಡುವಣ ಶಾಂತಿ ಒಪ್ಪಂದವಾಗಿತ್ತು. ಬ್ರಿಟಿಷ್ ದೊರೆಗಳ ಮುಂದೆ ತಾವು ಶಕ್ತಿಹೀನರು ಎಂಬುದನ್ನು ಈ ಪ್ರತಿನಿಧಿಗಳು ಗುರುತಿಸಿಕೊಂಡರೆ, ಭಾರತದ ಪ್ರಾಚೀನ ಸಾಮಾಜಿಕ ವ್ಯವಸ್ಥೆಯನ್ನು ನಾಶ ಮಾಡುವುದು ಆಳುವ ಅಧಿಕಾರದ ಉದ್ದೇಶವಲ್ಲ ಎಂಬುದನ್ನು ಮಾತಿನಲ್ಲಿ ಮತ್ತು ಕಾರ್ಯದಲ್ಲಿ ಬ್ರಿಟಿಷ್ ದೊರೆಗಳು ಸ್ಪಷ್ಟಪಡಿಸಿದರು.

ಆದ್ದರಿಂದ ಇಲ್ಲಿ ಒಂದು ಅಸಂಗತ ಸನ್ನಿವೇಶ ನಿರ್ಮಾಣಗೊಂಡಿತು. ಸಾಮಾನ್ಯವಾಗಿ ಹಳೆ ಸಾಮಾಜಿಕ ವ್ಯವಸ್ಥೆಯ ವೈರಿಗಳೆಂದು ಪರಿಗಣಿತವಾಗಬೇಕಾಗಿದ್ದ ಹೊಸ ದೊರೆಗಳು ಆ ವ್ಯವಸ್ಥೆಯನ್ನೇ ಕಾಪಾಡುವುದಕ್ಕೆ ಬದ್ಧರಾದರು.

ವಿದೇಶಿ ಬಂಡವಾಳಶಾಹಿ ದೊರೆಗಳು ಭಾರತದ ಹಳೆ ಸಾಮಾಜಿಕ ವ್ಯವಸ್ಥೆಯ ನಾಯಕರ ಇವರ ನಡುವೆ ಏರ್ಪಟ್ಟ ರಾಜಿಯು, ಇಬ್ಬರಿಗೂ ಸವಾಲಾಗುವ ಹೊಸ ಶಕ್ತಿಗಳನ್ನು ನಿಗ್ರಹಿಸಲು ಶಕ್ಯವಾಗಲಿಲ್ಲ. ಏಕೆಂದರೆ ಭಾರತ ಹಳೆ ಸಾಮಾಜಿಕ ವ್ಯವಸ್ಥೆಯ ನಾಯಕರೊಡನೆ ಅವರು ರಾಜಿ ಮಾಡಿಕೊಂಡರೂ ಪ್ರಾಚೀನ ಸಾಮಾಜಿಕ ಸಂಸ್ಥೆಗಳಿಂದ, ಅದರ ನಂಬಿಕೆ ಮತ್ತು ಸಂಸ್ಕೃತಿಗಳಿಂದ ಎಷ್ಟೇ ಕುಗ್ಗಿದ್ದರೂ ಉದಯವಾದ ಬಂಡವಾಳಶಾಹಿಯ ಬೆಳವಣಿಗೆಯನ್ನು ತಡೆಯಲು ವಿದೇಶದ ಹೊಸ ಬಂಡವಾಳಶಾಹಿ ದೊರೆಗಳಿಗೆ ಸಾಧ್ಯವಾಗಲಿಲ್ಲ. ಹಳ್ಳಿಗಳು ತಮ್ಮ ಸ್ವಾವಲಂಬನೆಯನ್ನು ಕಳೆದುಕೊಂಡು ವಿಶ್ವಮಾರುಕಟ್ಟೆಯ ಮೇಲೆ ಹೆಚ್ಚು ಅವಲಂಬಿತವಾದವು. ಜಾತಿಬದ್ಧ ದುಡಿಮೆ ವಿಭಜನೆಯ ಸಾಮಾಜಿಕ-ಆರ್ಥಿಕ ತಳಹದಿಯ ಮೇಲೆ ಕಟ್ಟಿದ್ದ ವಿದ್ಯೆ ಮತ್ತು ಸಂಸ್ಕೃತಿಯ ಪ್ರಾಚೀನ ವ್ಯವಸ್ಥೆಯು ಬೆಲೆ ಕಳೆದುಕೊಂಡು ನಾಶವಾಯಿತು. ಇದರ ಬದಲು ಕರ್ನಲ್ ಮೆಕಾಲೆ ರೂಪಿಸಿದ್ದ ಸೂಚನೆಗಳ ಆಧಾರದ ಮೇಲೆ ಕಟ್ಟಿದ ಹೊಸ ಬೂರ್ಜ್ವಾ ಶಿಕ್ಷಣ ಮತ್ತು ಸಂಸ್ಕೃತಿ ಬೆಳೆಯಿತು. ಹೊಸ ಸಾಮಾಜಿಕ ಸಂಬಂಧಗಳು ಸ್ಥಾಪಿತವಾದಾಗ ಜಾತಿ ಸಂಕೋಲೆಗಳು ಕಳಚಿಕೊಂಡವು. ಅಂತರ ಜಾತಿ ಭೋಜನ, ಅಂತರಜಾತಿ ಮದುವೆಗಳ ಬಗ್ಗೆ ಇದ್ದ ನಿಷೇಧಗಳು ಹೆಚ್ಚು ಹೆಚ್ಚು ಮಾಯವಾದವು. ಜೀವನದ ಹೊಸ ಮಾರ್ಗಗಳ ಬಗ್ಗೆ ಆಸಕ್ತಿಯಿದ್ದ ಬೆಳೆಯುತ್ತಿರುವ ಪೀಳಿಗೆಗಳ ಮೇಲೆ "ಒಳ್ಳೆಯ ಪ್ರಾಚೀನ" ಭಾರತೀಯ ಸಂಸ್ಕೃತಿ ಹೊಂದಿದ್ದ ಹಿಡಿತವನ್ನು ಇವು ದುರ್ಬಲಗೊಳಿಸಿದವು.

(ಮುಂದುವರೆಯುವುದು)

ಪ್ರಜಾಸತ್ತೆ, ಜನತೆಯ ಜೀವನವನ್ನು ರಕ್ಷಿಸಲು ಕರೆ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ತ್ರಿಪುರಾದ ಬೆಳವಣಿಗೆಗಳು :

ತುಂಬ ಕಷ್ಟ ಪರಿಸ್ಥಿತಿಯನ್ನು ಎದುರಿಸುತ್ತಿರುವ ತ್ರಿಪುರದ ವಾಮರಂಗ ಸರ್ಕಾರಕ್ಕೆ ಪೊಲಿಟ್‌ಬ್ಯೂರೋ ತನ್ನ ಬೆಂಬಲವನ್ನು ವ್ಯಕ್ತಪಡಿಸುತ್ತದೆ. ಅಮರಬಂಗಾಲಿಗಳಂತ ಶಕ್ತಿಗಳು ಮತ್ತು ತ್ರಿಪುರ ಉಪಜಾತಿ ಯುವ ಸಮಿತಿಯ ಉಗ್ರಗಾಮಿಗಳು ಅಲ್ಲಿನ ಘಟನೆಗಳಿಗೆ ಹಿಂಸಾತ್ಮಕ ತಿರುವನ್ನು ಕೊಟ್ಟಿದ್ದಾರೆ. ಇಂಥ ಶಕ್ತಿಗಳ ವಿರುದ್ಧ ದೃಢನಿಲುವನ್ನು ತಳೆಯುವುದರ ಬದಲು ತ್ರಿಪುರದ ಕಾಂಗ್ರೆಸ್ ಈ ಗುಂಪುಗಳನ್ನು ಬೆಂಬಲಿಸಿ, ಪರಿಸ್ಥಿತಿಯನ್ನು ದುರುಪಯೋಗಪಡಿಸಿಕೊಂಡು ವಾಮರಂಗ ಸರ್ಕಾರದ ವಜಾವನ್ನು ಕೇಳುತ್ತಿದೆ. ಪ್ರಜಾಪ್ರಭುತ್ವವಾದಿ ಶಕ್ತಿಗಳು ದೇಶದ ಐಕ್ಯತೆಯನ್ನು ಕಾಪಾಡುವ ಹೊಣೆಯನ್ನು ಪೂರ್ಣವಾಗಿ ಕಾಂಗ್ರೆಸ್ ಮೇಲೆ ಬಿಡಲಾಗುವುದಿಲ್ಲ. ಅಲ್ಪಸಂಖ್ಯಾತರ ರಕ್ಷಣೆ, ಅವರ ನಾಗರಿಕ ಹಕ್ಕುಗಳ ರಕ್ಷಣೆಮಾಡುವ ಮತ್ತು ಪ್ರತ್ಯೇಕತಾವಾದಿ ಶಕ್ತಿಗಳನ್ನು ಸೋಲಿಸುವುದನ್ನು ಮಾಡುವ ಉದ್ದೇಶಗಳನ್ನು ದೇಶದ ಎಲ್ಲ ಪಕ್ಷಗಳೂ ತಿಳಿಯಬೇಕು.

ವಾಮವಾದಿ ಸರ್ಕಾರಗಳ ರಕ್ಷಣೆ :

ಚುನಾವಣೆಯಲ್ಲಿ ಕಾಂಗ್ರೆಸ್ ಗಳಿಸಿರುವ ವಿಜಯವು ಕಾಂಗ್ರೆಸ್ ಅಲ್ಲದ ರಾಜ್ಯ ಸರ್ಕಾರಗಳಿಗೆ ಮತ್ತಷ್ಟು ಅಪಾಯ ತರಲಿದೆ. ಒಂಬತ್ತು ರಾಜ್ಯಗಳ ಸರ್ಕಾರಗಳನ್ನು ವಜಾಮಾಡುವಾಗ ಮತ್ತು ಅಲ್ಲಿನ ಚುನಾವಣಾ ಪ್ರಚಾರಗಳಲ್ಲಿ ಕೇಂದ್ರದಲ್ಲಿ ಆಳುವ ತಮ್ಮ ಪಕ್ಷವೇ ರಾಜ್ಯಗಳಲ್ಲೂ ಅಧಿಕಾರ ವಹಿಸಬೇಕೆಂದು ಇಂದಿರಾಗಾಂಧಿ ಪದೇಪದೇ ಹೇಳಿದ್ದಾರೆ. ಇದು ಸಂವಿಧಾನದ ಫೆಡರಲ್ ಸ್ವರೂಪದ ಮೇಲಿನ ನೇರ ಪ್ರಹಾರವಾಗಿದ್ದು, ಈಗ ರಾಜ್ಯಗಳಿಗಿರುವ ಸೀಮಿತ ಅಧಿಕಾರಗಳ ಮೇಲಿನ ಹಲ್ಲೆಯೂ ಆಗಿದೆ. ಅಲ್ಲದೆ ಇದು ಕಾಂಗ್ರೆಸ್ ಅಲ್ಲದ ಸರ್ಕಾರಗಳಿಗೆ, ಪ. ಬಂಗಾಳ, ತ್ರಿಪುರ, ಕೇರಳಗಳ ವಾಮರಂಗ ಸರ್ಕಾರಗಳು ಮತ್ತು ತಮಿಳುನಾಡಿನ ಎ ಐ ಡಿ ಎಂ ಕೆ ಸರ್ಕಾರಗಳಿಗೆ ಹಾಕಿದ ಬೆದರಿಕೆಯೂ ಆಗಿದೆ. ಕಾಂಗ್ರೆಸ್‌ನ ಪಟ್ಟಭದ್ರ ಹಿತಾಸಕ್ತಿಗಳ ನೀತಿಗೂ ವಾಮರಂಗ ಸರ್ಕಾರಗಳ ಜನಪರ ನೀತಿಗಳಿಗೂ ಮೂಲಭೂತ ವ್ಯತ್ಯಾಸ ಇದೆ. ವಾಮರಂಗ ಸರ್ಕಾರಗಳ ನೀತಿಗಳು ದೇಶದ ಎಲ್ಲ ಜನತೆಯ ಗಮನ ಸೆಳೆದಿವೆ ಮತ್ತು ಬಂಡವಾಳಶಾಹಿ-ಭೂಮಾಲೀಕ ಆಳಿಕೆಗೆ ಪರ್ಯಾಯವಾದ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಯ ಕಲ್ಪನೆ ಜನತೆಯಲ್ಲಿ ಬಲಗೊಳ್ಳುತ್ತಿದೆ. ಎಲ್ಲ ಅಧಿಕಾರವನ್ನು ತಮ್ಮ ಕೈಗಳಲ್ಲಿ ಕೇಂದ್ರೀಕರಿಸಿಕೊಳ್ಳಲು ಕಾಂಗ್ರೆಸ್ ಈ ಸರ್ಕಾರಗಳನ್ನು ಉರುಳಿಸುವ ಸೂಚನೆಗಳಿವೆ.

ವಾಮರಂಗ ರಾಜ್ಯಸರ್ಕಾರಗಳು, ಸರ್ವಾಧಿಕಾರ ವಿರೋಧಿ ವಿಜಯದ ಮುಖ್ಯ ಕೇಂದ್ರಗಳು. ಜನತೆಯ ಎಲ್ಲ ರಂಗಗಳ ಹೋರಾಟವನ್ನು ಬೆಂಬಲಿಸುವ ಅಪಾರ ಶಕ್ತಿ ಅಲ್ಲಿದೆ. ಭೂಮಾಲೀಕ ಬಂಡವಾಳಶಾಹಿ ರಾಜ್ಯಸರ್ಕಾರಗಳ ನೀತಿಗಳ ಜೊತೆ ಈ ಸರ್ಕಾರಗಳ ಪರ್ಯಾಯ ನೀತಿಗಳನ್ನು ಹೋಲಿಸಿ, ದೇಶದಾದ್ಯಂತ ಅವುಗಳ ಸಾಧನೆಗಳನ್ನು ಜನಪ್ರಿಯಗೊಳಿಸಿ, ಜನತೆಯನ್ನು ಸಂಘಟಿಸಿ, ಈ ಸರ್ಕಾರಗಳ ವಿರುದ್ಧ ಕಾಂಗ್ರೆಸ್ ರೂಪಿಸಿರುವ ಯೋಜನೆಗಳನ್ನು ವಿಫಲಗೊಳಿಸಬೇಕು. ಈ ರಾಜ್ಯಗಳಲ್ಲಿ ವಾಮಪಂಥೀಯರಿಗಿರುವ ದೌರ್ಬಲ್ಯಗಳು ತುಂಬಾ ಅಪಾಯಕಾರಿಯಾದ್ದರಿಂದ, ಒಗ್ಗಟ್ಟಿನಿಂದ ಅದನ್ನು ಪರಿಹರಿಸಿಕೊಳ್ಳಬೇಕೆಂದು ಎಲ್ಲ ವಾಮಪಕ್ಷಗಳಿಗೆ ಸಿಪಿಐ(ಎಂ) ಕರೆನೀಡುತ್ತದೆ.

ವಾಮಶಕ್ತಿಗಳು ಸಾಧಿಸಿರುವ ಒಗ್ಗಟ್ಟನ್ನು ದೃಢಪಡಿಸುವುದು, ದೇಶದ ಐಕ್ಯತೆಯನ್ನು ರಕ್ಷಿಸಲು ಚಳುವಳಿ ಹೂಡುವುದು, ರಾಜ್ಯಗಳ ಸ್ವಾಯತ್ತತೆಯನ್ನು ಕಾಪಾಡುವುದು, ವಾಮರಂಗ ಸರ್ಕಾರಗಳನ್ನು ಎಲ್ಲ ಪಿತೂರಿಗಳಿಂದ ರಕ್ಷಿಸುವುದು, ಬರಲಿರುವ ಹೊಡೆತಗಳಿಂದ ಜನತೆಯ ಜೀವನವನ್ನು ಕಾಪಾಡುವುದು ಇವೆಲ್ಲವೂ ಪಕ್ಷದ ಕರ್ತವ್ಯವಾಗಿದೆ. ಇದಕ್ಕೆ ಪಕ್ಷದ ದೌರ್ಬಲ್ಯಗಳೂ ಅತಿ ಬೇಗ ನಿವಾರಣೆಗೊಂಡು ಬಲಿಷ್ಠಪಕ್ಷ ಬೆಳೆಯಬೇಕಾಗಿದೆ. ಪಕ್ಷವು ಜನತೆಯ ಜೊತೆ ನೇರವಾಗಿ ಬೆರೆಯದಿದ್ದರೆ ಈ ಕೆಲಸ ಆಗುವುದಿಲ್ಲ. ಬರುವ ದಿನಗಳಲ್ಲಿ ಪರಿಣಾಮಕಾರಿ ಪಾತ್ರವಹಿಸಲು ಸಾಮೂಹಿಕ ಸಂಘಟನೆಗಳೂ ತಮ್ಮ ದೌರ್ಬಲ್ಯಗಳನ್ನು ಬೇಗ ನೀಗಿಕೊಳ್ಳಬೇಕು. "ಪ್ರಜಾಪ್ರಭುತ್ವ ಮತ್ತು ಜನತೆಯ ಜೀವನವನ್ನು ರಕ್ಷಿಸಲು ಎಲ್ಲ ಕೈಗಳೂ ದುಡಿಯಲಿ. ಸರ್ವಾಧಿಕಾರ ಆಳ್ವಿಕೆಯನ್ನು ತರಬಯಸಿರುವ ಕಾಂಗ್ರೆಸ್‌ನ ಯೋಜನೆಗಳನ್ನು ದೇಶದ ಎಲ್ಲ ಪ್ರಜಾಪ್ರಭುತ್ವವಾದಿ ಶಕ್ತಿಗಳು ವಿಫಲಗೊಳಿಸಲಿ".

ಸಂಯುಕ್ತ ಹೋರಾಟಕ್ಕೆ ಉಡುಪಿಯಲ್ಲಿ ತಯ್ಯಾರಿ

ಕಾರ್ಮಿಕರ, ನೌಕರರ, ರೈತರ, ಕೃಷಿಕೂಲಿಗಾರರ ಹಾಗೂ ಜನಸಾಮಾನ್ಯರ ಸಮಸ್ಯೆಗಳ ಬಗ್ಗೆ ಚರ್ಚಿಸುವ ಉದ್ದೇಶದಿಂದ ತಾ. 14-6-80 ರಂದು ಪಿಂಟೋ ಕಟ್ಟಡ, ಅಜ್ಜರಕಾಡು, ಉಡುಪಿ-ಇಲ್ಲಿ ಕರೆಯಲಾಗಿದ್ದ ಸಭೆಯಲ್ಲಿ ಉಡುಪಿ ಮತ್ತು ಆಸುಪಾಸಿನ ಕಾರ್ಮಿಕ ಪ್ರತಿನಿಧಿಗಳು ಹಾಜರಿದ್ದು, ತಮ್ಮೆಲ್ಲಾ ಸಮಸ್ಯೆಗಳ ಪರಿಹಾರಕ್ಕೆ ಐಕ್ಯ ಹೋರಾಟವೊಂದೇ ದಾರಿ ಮತ್ತು ಅದಕ್ಕಾಗಿ ಹಿಂದೆ ಅಸ್ತಿತ್ವದಲ್ಲಿದ್ದ ಸಂಯುಕ್ತ ಕಾರ್ಮಿಕ ಕ್ರಿಯಾ ವೇದಿಕೆಯನ್ನು ಪುನರುಜ್ಜೀವನಗೊಳಿಸುವುದು ಅಗತ್ಯವೆಂಬ ಒಮ್ಮತದ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಸಭೆಯಲ್ಲಿ ಜೀವವಿಮೆ, ಸಾಮಾನ್ಯವಿಮೆ. ಅಂಚೆ ಮತ್ತು ತಂತಿ, ಮುನಿಸಿಪಾಲಿಟಿ ವಿದ್ಯುಚ್ಛಕ್ತಿ ರಂಗ, ಬಾಡಿಗೆದಾರರು, ಬೀಡಿ ಕಾರ್ಮಿಕರು, ನೇಯ್ಗೆ ಕೆಲಸಗಾರರು ಮತ್ತು ಮೂರ್ತೆದಾರರ ಪ್ರತಿನಿಧಿಗಳೂ, ಸಿ.ಐ.ಟಿ.ಯು. ಮತ್ತು ಎ.ಐ.ಟಿ.ಯು.ಸಿ. ಸಂಘಟನೆಗಳ ಮುಂದಾಳುಗಳೂ ಭಾಗವಹಿಸಿದ್ದರು.

ದುಡಿಯುವ ಜನರು ಮತ್ತು ಜನಸಾಮಾನ್ಯರು ಎದುರಿಸುತ್ತಿರುವ ಸಮಸ್ಯೆಗಳನ್ನು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಹೆಚ್ಚುತ್ತಿರುವ ಹಣದುಬ್ಬರದ ಪರಿಣಾಮವಾಗಿ ತೀವ್ರಗೊಳ್ಳುತ್ತಿರುವ ಆರ್ಥಿಕ ಬಿಕ್ಕಟ್ಟಿಗೆ ಸಿಕ್ಕಿ, ಕಾರ್ಮಿಕರ ಮತ್ತು ಜನಸಾಮಾನ್ಯರ ಜೀವನ ದಿನೇ ದಿನೇ ದುರ್ಬಲವಾಗುತ್ತಿದೆ. ಸಮಸ್ಯೆಗಳನ್ನು ಪರಿಹರಿಸಲು ವಿಫಲಗೊಂಡಿರುವ ಸರಕಾರ, ಸಂಘಟಿತ ಕಾರ್ಮಿಕ ವರ್ಗದ ಚಳುವಳಿಗಳನ್ನು ಹತ್ತಿಕಲು ಮುಷ್ಕರ ವಿರೋಧಿ ಶಾಸನಗಳನ್ನು ಜಾರಿಗೊಳಿಸಲು ಹವಣಿಸುತ್ತಿದೆ. ತಮ್ಮ ಆದಾಯದ ಬಹುಪಾಲನ್ನು ಬಾಡಿಗೆ ತೆರಲು ವಿನಿಯೋಗಿಸುತ್ತಿರುವ ಬಾಡಿಗೆದಾರರ ಜೀವನ ಅಸಹನೀಯವಾಗುತ್ತಿದೆ. ಈ ಎಲ್ಲಾ ಸಮಸ್ಯೆಗಳಿಗೆ ಐಕ್ಯ ಹೋರಾಟವೊಂದೇ ದಾರಿಯೆಂಬ ಒಮ್ಮತದ ಅಭಿಪ್ರಾಯಕ್ಕೆ ಸಭೆ ಬಂದಿತು.

ಕಾ|| ಪಿ. ವಿಶ್ವನಾಥರೈ ಅವರನ್ನು ಸಂಯುಕ್ತ ಕಾರ್ಮಿಕ ಕ್ರಿಯಾ ವೇದಿಕೆ, ಉಡುಪಿ ಇದರ ಸಂಚಾಲಕರನ್ನಾಗಿ ಸಭೆಯಲ್ಲಿ ಸರ್ವಾನುಮತದಿಂದ ಆರಿಸಲಾಯಿತಲ್ಲದೆ, ಬೆಲೆಯೇರಿಕೆಯನ್ನು ತಡೆಗಟ್ಟುವಲ್ಲಿ ಸರಕಾರದ ವೈಫಲ್ಯವನ್ನು ತೀವ್ರವಾಗಿ ಖಂಡಿಸಿ, ಅವಶ್ಯಕ ಸೇವೆಗಳಲ್ಲಿ ಮುಷ್ಕರ ನಿಯಂತ್ರಣ ಮಸೂದೆಯನ್ನು ಪ್ರತಿಭಟಿಸಿ, ಬೆಂಗಳೂರಿನ ಮೈಕೋ ಮತ್ತು ಐಟಿಸಿ ಕಾರ್ಮಿಕ ನಾಯಕರನ್ನು ಗಡೀಪಾರು ಮಾಡುವ ಸರಕಾರದ ಕ್ರಮವನ್ನು ಖಂಡಿಸಿ, ಬೆಂಗಳೂರಿನ ಐ. ಟಿ. ಸಿ. ಕಾರ್ಮಿಕರ, ಬೆಳಗಾವಿಯ ಇಂಡಿಯನ್ ಅಲ್ಯೂಮಿನಿಯಂ ಕಾರ್ಮಿಕರ, ಪವರ್‌ಲೂಮ್ ಕಾರ್ಮಿಕರ ಹಾಗೂ ಹೋಮಿಯೋಪತಿ ಕಾಲೇಜ್ ವಿದ್ಯಾರ್ಥಿಗಳ ಹೋರಾಟಗಳನ್ನು ಬೆಂಬಲಿಸಿ ಠರಾವುಗಳನ್ನು ಅಂಗೀಕರಿಸಲಾಯಿತು. ಉಡುಪಿ ಹಾಗೂ ಆಸುಪಾಸಿನ ಕಾರ್ಮಿಕರ ಸಂಘಟನೆಗಳ ಸಮಾವೇಶವನ್ನು 29-6-80ರಂದು ನಡೆಸಿ, ಜನರಿಗೆ ತಿಳುವಳಿಕೆ ಕೊಡಲು ಮತ್ತು ಹೋರಾಟದ ಯೋಜನೆ ಹಾಕಲು ನಿರ್ಧರಿಸಲಾಯಿತು.

ಬಾಗಲಕೋಟೆಯಲ್ಲಿ ಆಮರಣ ಉಪವಾಸ

ತ್ರಿಪಕ್ಷೀಯ ಸಮಿತಿಯ ಶಿಫಾರಸನ್ನು ಜಾರಿಗೊಳಿಸಲು ಬಾಗಲಕೋಟೆ ನೂಲಿನ ಗಿರಣಿ ಕಾರ್ಮಿಕರು 26-4-80ರಿಂದ ಮುಷ್ಕರ ಹೂಡಿದ್ದು, ಅದು ಇತ್ಯರ್ಥವಾಗುವ ಲಕ್ಷಣ ಕಾಣದ್ದರಿಂದ ಐವರು ಕಾರ್ಮಿಕರು 17-6-80ರಿಂದ ಆಮರಣ ಉಪವಾಸ ಕೈಗೊಂಡಿದ್ದಾರೆ. ಅವರ ಪೈಕಿ ಮೂವರ ಪರಿಸ್ಥಿತಿ ಚಿಂತಾಜನಕವಾದುದರಿಂದ ಅವರನ್ನು ಪೋಲೀಸರು ಆಸ್ಪತ್ರೆಗೆ ಸೇರಿಸಿದ್ದಾರೆ. ಬೇಡಿಕೆ ಈಡೇರಿಸಿಕೊಳ್ಳಲು ಕಾರ್ಮಿಕರು ತೀವ್ರತರವಾದ ಹೋರಾಟ ನಡೆಸಲು ನಿರ್ಧರಿಸಿದ್ದಾರೆ.

ಪುಸ್ತಕ ವಿಮರ್ಶೆ

ನಿಲುವಿಲ್ಲದ ನೋವು

ಹೋರಾಟದ ಹಾಡುಗಳು: ವಿವಿಧ ಲೇಖಕರು; ಕರ್ನಾಟಕ ದಲಿತ ಸಂಘರ್ಷ ಸಮಿತಿ ಪ್ರಕಟಣೆ; ಮೈಸೂರು; ಪುಟ 68; ಬೆಲೆ ರೂ 5.

ಹೋರಾಟದ ಹಾಡುಗಳು ದಲಿತರ ಬವಣೆಯನ್ನು ಚಿತ್ರಿಸುವ, ಅವರಿಗೆ ಜಾಗೃತರಾಗಿರೆಂದು ಕರೆನೀಡುವ ಹಾಡುಗಳು. ಇದರಲ್ಲಿ ಹಾಡು ಬರೆದವರ ಹೆಸರುಗಳನ್ನು ಕೊಟ್ಟಿಲ್ಲ. ಸಿದ್ಧಲಿಂಗಯ್ಯನವರಂಥ ಕೆಲವರು ಬರೆದ ಹಾಡುಗಳನ್ನು ಮಾತ್ರ ಗುರುತು ಹಿಡಿಯಬಹುದಷ್ಟೆ. ಕೆಲವು ದಬ್ಬಾಳಿಕೆ ಪ್ರಕರಣಗಳಿಗೆ ವ್ಯಕ್ತಿಗಳಿಗೆ ನೊಂದು ಕಟ್ಟಿದಂಥ ಹಾಡುಗಳೂ ಇಲ್ಲಿವೆ. ಬೆಲ್ಚಿ, ದಾಸನಪುರ ಪ್ರಕರಣಗಳ ಹಾಡುಗಳು, ಲಚ್ಚುಮಮ್ಮ, ತಂಗಿ ಅನುಸೂಯ ಚೆನ್ನಿಬಲಿ ಹಾಡುಗಳು ಇಂಥವು.

ಎಲ್ಲ ಹಾಡುಗಳಲ್ಲಿ ಕಾಣಬರುವ ಒಂದು ಪ್ರಧಾನ ಅಂಶವೆಂದರೆ ದಲಿತರು ತಮ್ಮ ಮೇಲಿನ ದಬ್ಬಾಳಿಕೆಯ ಬಗ್ಗೆ ಸಾಕಷ್ಟು ಎಚ್ಚರಗೊಂಡಿದ್ದಾರೆಂಬುದು. ಸಾಹಿತ್ಯಕ ಸಂದರ್ಭದಲ್ಲಿರಲಿ, ನಮ್ಮ ಸಾಮಾಜಿಕ ಸಂದರ್ಭದಲ್ಲಿ ಈ ಎಚ್ಚರ ಅತ್ಯಂತ ಸ್ವಾಗತಾರ್ಹವಾದುದು. ಹಾಡುಗಳನ್ನು ಹಳ್ಳಿಹಳ್ಳಿಗಳಲ್ಲಿ ಹಾಡಿ ಆ ಮೂಲಕ ಎಚ್ಚರವನ್ನು ಬಿತ್ತುವ ಕೆಲಸವನ್ನು ದಲಿತ ಕಲಾಮಂಡಲಿ ಮಾಡುತ್ತಿದೆ. ಈ ಕಾರ್ಯ, ಕಾವ್ಯದ ಅಥವಾ ಹಾಡಿನ ಸಾಮಾಜಿಕ ಜವಾಬ್ದಾರಿಯನ್ನು ವಿಸ್ತರಿಸುತ್ತಿದೆ. ತೆಲುಗಿನಲ್ಲಿ ಈ ಕೆಲಸ ಬಹಳ ಹಿಂದಿನಿಂದಲೇ ನಡೆಯುತ್ತಿದೆ.

ಈ ಸನ್ನಿವೇಶದಲ್ಲಿ ಎರಡು ಮುಖ್ಯ ಅಂಶಗಳನ್ನು ಪ್ರಸ್ತಾಪಿಸುವುದು ಅಗತ್ಯ. ಮೊದಲನೆಯದು ಹಾಡುಗಳ ಸಾಹಿತ್ಯಕಗುಣ ಅಥವಾ ಗೇಯಗುಣ. ಇಲ್ಲಿನ ಎಲ್ಲ ಹಾಡುಗಳೂ ಕಾವ್ಯಾಂಶವನ್ನು ಪಡೆದಿಲ್ಲ. ನಾನು ಈ ಮಾತುಗಳನ್ನು ಪ್ರತಿಷ್ಠಿತ ವಿಮರ್ಶೆಯ ದೃಷ್ಟಿಕೋನದಿಂದ ಹೇಳುತ್ತಿಲ್ಲ. ಪಾಡನ್ನು ಹಾಡಾಗಿಸುವ ಕಲೆಗಾರಿಕೆ ಕೈಗೂಡಿದರೆ ಹೇಳುವುದನ್ನು ಇನ್ನಷ್ಟು ಸಮರ್ಥವಾಗಿ ಮನನೀಯವಾಗಿ ಮುಟ್ಟಿಸಬಹುದು. ನಮ್ಮ ಜನಪದಸಾಹಿತ್ಯವೆಲ್ಲ ದಲಿತರು ಸೃಷ್ಟಿಸಿದ್ದು ಎಂಬುದನ್ನು ನೆನೆದರೆ ನನಗೆ ದಲಿತರ ಕಲೆಗಾರಿಕೆಯ ಬಗ್ಗೆ ಇನ್ನಷ್ಟು ಭರವಸೆ ಮೂಡುತ್ತದೆ.

ಎರಡನೆಯ ಅಂಶ ಸೈದ್ಧಾಂತಿಕ ನಿಲುವಿಗೆ ಸಂಬಂಧಿಸಿದ್ದು. "ಹೋರಾಟ ಒಂದೇನೇ ಬಡವರ ಬಿಡುಗಡೆಯ ದಾರಿಗೆ" "ಕೊನೆಗಾಣದ ಬಾಳಿನ ಗೋಳಿಗೆ ಹೋರಾಟವೆ ದಾರಿ" ಎಂಬ ಮಾತುಗಳು ಪೂರ್ಣವಾಗಿ ಒಪ್ಪತಕ್ಕವು. ಆದರೆ ಹೋರಾಟದ ದಾರಿ ಯಾವುದು? ಇಕ್ಕುವುದೆ, ಒದೆಯುವುದೆ? ದೊಣ್ಣೆ ಹಿಡಿದು ಬಗ್ಗು ಬಡಿಯುವುದೆ? ಅಥವಾ ಶೋಷಣೆಯ ಮೂಲಗಳನ್ನು ಗುರುತಿಸಿಕೊಂಡು ಎಲ್ಲ ಶೋಷಿತರ ಜೊತೆ ಒಂದಾಗಿ ಪ್ರತಿಭಟಿಸುವುದೆ? ನೋವಿನ ಬಗ್ಗೆ ಎಚ್ಚರಗೊಂಡ ಜನ, ನೋವಿನ ಮೂಲದ ಬಗ್ಗೆ, ಅದರ ವಿನಾಶದ ಬಗ್ಗೆ ಸೈದ್ಧಾಂತಿಕವಾಗಿ ಆಲೋಚಿಸಲು ಆರಂಭಿಸಿದರೆ ದಲಿತ ಚಳುವಳಿಗೆ ಬೇರೊಂದು ಆಯಾಮವೇ ದೊರೆಯುತ್ತದೆ; ಆಗ ಹೋರಾಟ ಪೂರ್ಣವಾಗುತ್ತದೆ. ಹೋರಾಟದ ಹಾಡುಗಳು ಇನ್ನಷ್ಟು ಅರ್ಥಪೂರ್ಣವಾಗುತ್ತದೆ.

ಎಸ್. ಎಫ್. ಐ. ವಿದ್ಯಾರ್ಥಿಗಳ ಜಯ

ಕುಂದಾಪುರತಾಲ್ಲೂಕಿನ ಕೋಟೇಶ್ವರ ಗ್ರಾಮದ ಸರಕಾರಿ ಹೈಸ್ಕೂಲಿನ ವಿದ್ಯಾರ್ಥಿ ಸಂಘಕ್ಕೆ 1980-81 ನೇ ಸಾಲಿಗೆ ನಡೆದ ಚುನಾವಣೆಯಲ್ಲಿ ಎಸ್. ಎಫ್. ಐ ವಿದ್ಯಾರ್ಥಿಗಳು ಭಾರಿ ಜಯ ಸಾಧಿಸಿದ್ದಾರೆ.

ಸ್ಥಳೀಯ ಎಸ್. ಎಫ್. ಐ. ಕಾರ್ಯದರ್ಶಿಯಾದ ಶ್ರೀ ಕೆ. ಕೃಷ್ಣ ಸೆಟ್ಟಿಗಾರ್‌ರವರು ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಎಸ್. ಎಫ್. ಐ. ಅಧ್ಯಕ್ಷರಾದ ಶ್ರೀ ಅನ್ವರ್ ಕೆ. ಅವರು ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಶ್ರೀ ಕೆ. ಕೃಷ್ಣ ಸೆಟ್ಟಿಗಾರರು ತ್ರಿಕೋನ ಸ್ಪರ್ಧೆಯಲ್ಲಿ ಭಾರೀ ಬಹುಮತದಿಂದ ಆಯ್ಕೆಯಾದರೆ ಶ್ರೀ ಅನ್ವರ್‌ರವರು ಅವಿರೋಧವಾಗಿ ಆಯ್ಕೆಯಾದರು. ಕುಂದಾಪುರ ತಾಲ್ಲೂಕು ಎಸ್. ಎಫ್. ಐ. ಸಮಿತಿಯು ಇವರುಗಳಿಗೆ ತನ್ನ ಅಭಿನಂದನೆಯನ್ನು ಸಲ್ಲಿಸಿದೆ ಮತ್ತು ಸ್ಥಳೀಯವಾಗಿ ಇನ್ನೂ ಹುರುಪಿನಿಂದ ಕಾರ್ಯನಿರ್ವಹಿಸುವಂತೆ ಕೇಳಿಕೊಂಡಿದೆ.

ವಿ. ವಿ. ಗಿರಿ ನಿಧನ

ಮಾಜಿ ರಾಷ್ಟ್ರಪತಿ ವಿ.ವಿ. ಗಿರಿಯವರ ನಿಧನದಿಂದ ದೇಶದ ಉನ್ನತ ಕಾರ್ಮಿಕನಾಯಕರೊಬ್ಬರು ಇಲ್ಲವಾದಂತಾಗಿದೆ. ಸಿ.ಐ.ಟಿ.ಯು. ಉಪಾಧ್ಯಕ್ಷ ಕಾಂ. ಪಿ. ರಾಮಮೂರ್ತಿ, ಗಿರಿಯವರ ಕಾರ್ಮಿಕ ಸೇವೆಯನ್ನು ಅದರಲ್ಲೂ ರೈಲ್ವೆ ಕಾರ್ಮಿಕರಿಗಾಗಿ ಅವರು ದುಡಿದಿರುವುದನ್ನು ಸ್ಮರಿಸಿದ್ದಾರೆ.

ದ. ಕೊರಿಯಾದಲ್ಲಿ ಫ್ಯಾಸಿಸ್ಟ್-ಮಿಲಿಟರಿ ಪಂಗಡದ ವಿರುದ್ಧ ವಿರೋಚಿತ ಹೋರಾಟ

(3ನೇ ಪುಟದಿಂದ)

ಜಂಗ್‌ನನ್ನು ಪುನಃ ಸೆರೆಮನೆಗಟ್ಟಿತು. ಈ ಜನಪ್ರಿಯ ನಾಯಕನು ಉ. ಕೊರಿಯಾದೊಡನೆ ದ. ಕೊರಿಯಾದ ಐಕ್ಯದ ಪರವಾಗಿರುವುದರಿಂದ ಇವನು ರಾಷ್ಟ್ರಾಧ್ಯಕ್ಷನಾಗುವುದು ಮಿಲಿಟರಿ ಅಧಿಕಾರಿಗಳಿಗೆ ಬೇಡವಾಗಿದೆ. ಕಾರಣ, ಅಮೇರಿಕದ ಅಭಿಪ್ರಾಯವೂ ಅದೇ ಆಗಿದೆ! ರಾಜಕೀಯ, ಆರ್ಥಿಕ, ಸಂವಿಧಾನ, ಇತ್ಯಾದಿ ಮಹತ್ವದ ವಿಷಯಗಳನ್ನು ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಸ್ವಲ್ಪ ದಿನಗಳಲ್ಲಿಯೇ ಚರ್ಚಿಸಬೇಕಿತ್ತು. ಅದಕ್ಕೆ ಅವಕಾಶ ನೀಡದಂತೆ ಸಮಯ ಸಾಧಿಸಿ ಈ ಕ್ಷಿಪ್ರಕ್ರಾಂತಿಯನ್ನು ನಡೆಸಲಾಗಿತ್ತು. ಪರಿಣಾಮವಾಗಿ, ದ. ಕೊರಿಯಕ್ಕೆ ಪ್ರಜಾಸತ್ತೆ ಮರಳುವುದೂ, ಉ. ಕೊರಿಯದೊಂದಿಗೆ ಶಾಂತಿ ಸಂಧಾನಗಳ ಮೂಲಕ ಐಕ್ಯಗೊಳ್ಳುವುದೂ ದೂರ ಉಳಿಯಿತು.

ಕ್ವಾಂಗ್ಜು ಬಂಡಾಯ :

ಈ ಹಿನ್ನೆಲೆಯಲ್ಲಿ ಮೇ ತಿಂಗಳ ಕೊನೆಯಲ್ಲಿ ವಿದ್ಯಾರ್ಥಿಗಳು, ಕಾರ್ಮಿಕರು, ಜನಸಾಮಾನ್ಯರು ದ. ಕೊರಿಯಾದ ಕ್ವಾಂಗ್ಜು ಪ್ರದೇಶದಲ್ಲಿ ಮಿಲಿಟರಿ ಆಡಳಿತ ವಿರುದ್ಧ ಸಶಸ್ತ್ರ ಬಂಡಾಯ ಎದ್ದರು. ಈ ಬಂಡಾಯ ಕೊರಿಯಾದ ಇತಿಹಾಸದಲ್ಲಿಯೇ ಅತ್ಯಪೂರ್ವವಾಗಿದೆ, ಅತ್ಯದ್ಭುತವಾಗಿದೆ. ಫ್ಯಾಸಿಸ್ಟ್-ಮಿಲಿಟರಿ ಆಳ್ವಿಕೆಯ ಕ್ರೌರ್ಯ ದಬ್ಬಾಳಿಕೆಗಳನ್ನು ಪ್ರತಿಭಟಿಸಿದ ಈ ವಿರೋಚಿತ ಹೋರಾಟ ಒಂದು ಕ್ರಾಂತಿಯ ಲಕ್ಷಣಗಳನ್ನೆಲ್ಲಾ ಹೋಲುವುದು. ಸಶಸ್ತ್ರ ನಾಗರಿಕರು ಇಡೀ ಪ್ರಾಂತ್ಯವನ್ನೇ ಸ್ವಾಧೀನಪಡಿಸಿಕೊಂಡರು, ಅನೇಕ ಪಟ್ಟಣಗಳಲ್ಲಿ ಶಸ್ತ್ರಾಗಾರಗಳನ್ನು ವಶಪಡಿಸಿಕೊಂಡರು, ಬಂಡಾಯದ ಕರೆಗೆ ದೇಶಾದ್ಯಂತ ವ್ಯಾಪಕವಾದ ಬೆಂಬಲ ದೊರಕಿತು. ಪೋಲೀಸರೂ ಬೆಂಬಲ ನೀಡಿದರು. ಬಂಡಾಯದಲ್ಲಿ ಸಾವಿರಾರು ತೀವ್ರಗಾಮಿ ಕಾರ್ಮಿಕರೂ, ರಾಜಕೀಯ ಪ್ರಜ್ಞೆ ಉಳ್ಳ ವಿದ್ಯಾರ್ಥಿಗಳೂ ಮತ್ತಿತರ ಪ್ರಜಾಪ್ರಭುತ್ವವಾದಿ ಶಕ್ತಿಗಳೂ ತಮ್ಮ ತಮ್ಮಲ್ಲಿದ್ದ ಶಸ್ತ್ರಾಸ್ತ್ರಗಳೊಂದಿಗೆ ಭಾಗವಹಿಸಿದ್ದರು, ಬಲಿಷ್ಠ ಅನಾಗರಿಕ ಮಿಲಿಟರಿ-ಫ್ಯಾಸಿಸ್ಟ್ ಶಕ್ತಿಗಳನ್ನು ಜೀವದ ಹಂಗು ತೊರೆದು ಎದುರಿಸಿದ್ದರು. ಕ್ವಾಂಗ್ಜು ಬಂಡಾಯಗಾರರಿಗೆ ತಿಳಿದಿದೆ, ತಾವು ಬಲಿಷ್ಠ ಮಿಲಿಟರಿ ಶಕ್ತಿಯೊಂದಿಗೆ ಹೆಚ್ಚು ಸಮಯ ಹೋರಾಡಲಾರೆವು ಎಂದು. ಆದರೆ, ಅವರಿಗೆ ತಿಳಿದಿದೆ, ಬಂಡಾಯವನ್ನು ಬಲಪ್ರಯೋಗಿಸಿ ಹತ್ತಿಕ್ಕಿದರೂ ಮಿಲಿಟರಿ-ಫ್ಯಾಸಿಸ್ಟ್ ಆಳ್ವಿಕೆಯ ದಬ್ಬಾಳಿಕೆಯ ವಿರುದ್ಧ ತಮ್ಮ ಪ್ರತಿಭಟನೆಯನ್ನು ವ್ಯಕ್ತಗೊಳಿಸುವ ಮೂಲಭೂತ ಹಕ್ಕುಗಳನ್ನೂ ಸ್ವಾತಂತ್ರ್ಯವನ್ನೂ ಅನವರತವೂ ಕಸಿದುಕೊಳ್ಳಲಾರದು ಎಂದು.

ದ. ಕೊರಿಯಾದ ಮಿಲಿಟರಿ-ಫ್ಯಾಸಿಸ್ಟ್ ಆಡಳಿತವು ಕ್ವಾಂಗ್ಜು ಬಂಡಾಯದಿಂದ ಏನೂ ಪಾಠಕಲಿತಂತಿಲ್ಲ. ಬಂಡಾಯವನ್ನಡಗಿಸಿದ ಕೃಪ್ತಿಯ ಮತ್ತಿನಲ್ಲಿದೆ. ಲಷ್ಕರಿಶಾಸನವನ್ನು ಅನಿರ್ದಿಷ್ಟಾವಧಿಯವರೆಗೆ ಮುಂದುವರಿಸಲು ನಿರ್ಧರಿಸಿದೆ. ಆಡಳಿತವನ್ನು 25 ಸದಸ್ಯರುಳ್ಳ ಮಿಲಿಟರಿ ಸಲಹಾ ಮಂಡಳಿ ವಹಿಸಿಕೊಂಡಿದೆ. ದೇಶಕ್ಕೆ ಹೊಸ ಸಂವಿಧಾನವನ್ನು ಈ ಮಂಡಳಿಯೇ ಪರಿಶೀಲಿಸಲಿರುವುದು. ಮೊದಲೇ ಅಧಿಕಾರ ಹೀನವಾದ ರಾಷ್ಟ್ರೀಯ ಅಸೆಂಬ್ಲಿಯನ್ನು ಸಂಪೂರ್ಣ ನಿಷ್ಕ್ರಿಯಗೊಳಿಸಲಾಗಿದೆ.

ಆದರೆ ಚರಿತ್ರೆಯು ಸರ್ವಾಧಿಕಾರಿಗಳಿಗೆ, ನಿರಂಕುಶ ಪ್ರಭುಗಳಿಗೆ, ಸಾಮ್ರಾಜ್ಯಶಾಹಿಗಳಿಗೆ, ಬಂಡವಾಳಶಾಹಿಗಳಿಗೆ ಮಾತ್ರ ಸೇರಿದ್ದಲ್ಲ. ಚರಿತ್ರೆಯ ನಿರ್ಮಾಪಕರು ಕ್ವಾಂಗ್ಜು ಬಂಡಾಯಗಾರರಂತಹ ಜನಸಾಮಾನ್ಯರು, ಕಾರ್ಮಿಕರು, ಶೋಷಿತರು. ಬಂಡಾಯವನ್ನಡಗಿಸಿದರೂ ಜನರು ದಬ್ಬಾಳಿಕೆ ಶೋಷಣೆಗಳ ವಿರುದ್ಧ ಬಡಿದೇಳುವ ದೃಢನಿರ್ಧಾರವನ್ನು ಅಡಗಿಸಲು ಸಾಧ್ಯವಿಲ್ಲ. ದ. ಕೊರಿಯದ ಜನರ ಪ್ರಜಾಸತ್ತಾತ್ಮಕ ಹೋರಾಟವು ಅನತಿದೂರದಲ್ಲಿಯೇ ಯಶಸ್ವಿಯಾದೀತು. ಅಲ್ಲಿನ ಜನರೂ ಸಮಾಜವಾದಿ ರಾಷ್ಟ್ರವಾದ ಉ. ಕೊರಿಯದ ತಮ್ಮ ದೇಶಬಾಂಧವರೊಂದಿಗೆ ಶಾಂತಿಯುತವಾಗಿ ಐಕ್ಯಮತ್ಯಗೊಳ್ಳುವರು ಎಂಬ ಭರವಸೆ ನಮಗಿದೆ.

—ರಾಂ

ಆಪಾದನೆಗಳು ನಿರಾಧಾರ : ನೃಪೇನ್ ಚಕ್ರವರ್ತಿ

ಕೇಂದ್ರ ಸರ್ಕಾರದ ಗೃಹ ಮಂತ್ರಿ ಜೈಲ್‌ಸಿಂಗ್ ಅವರು ತ್ರಿಪುರ ಸರ್ಕಾರದ ಬಗ್ಗೆ ಮಾಡಿರುವ ಆಪಾದನೆಗಳು ನಿರಾಧಾರ ಎಂದು ತ್ರಿಪುರದ ಮುಖ್ಯಮಂತ್ರಿ ನೃಪೇನ್ ಚಕ್ರವರ್ತಿ ಅಲ್ಲಗಳೆದಿದ್ದಾರೆ.

ಕೇಂದ್ರ ಕೊಟ್ಟ ಎಚ್ಚರಿಕೆಗಳನ್ನು ಸರ್ಕಾರ ಪಾಲಿಸಿಲ್ಲ, ಬುಡಕಟ್ಟಿನ ಉಗ್ರಗಾಮಿಗಳ ಜೊತೆ ರಾಜಕೀಯ ಒಪ್ಪಂದ ಮಾಡಿಕೊಂಡದ್ದು ತಪ್ಪು, ಮುಖ್ಯಮಂತ್ರಿ ಬುಡಕಟ್ಟು ಶಿಬಿರಗಳಿಗೆ ಹೋಗಿ ಬಯಲು ಸೀಮೆ ಜನರ ವಿರುದ್ಧ ಇವರನ್ನು ಉದ್ದೀಪಿಸಿದ್ದಾರೆ ಎಂಬ ಗೃಹಮಂತ್ರಿಗಳ ಆಪಾದನೆಗಳು ಸುಳ್ಳುವರದಿಗಳನ್ನು ಅವಲಂಬಿಸಿವೆ ಎಂದು ನೃಪೇನ್ ಹೇಳಿದ್ದಾರೆ. ಕೇಂದ್ರ ಎಚ್ಚರಿಕೆಗಳನ್ನು ಕೊಟ್ಟಿಲ್ಲ. ಕೊಟ್ಟಿದ್ದರೆ ಅದರ ದಾಖಲೆಗಳನ್ನು ಸಂಸತ್ತಿನ ಮುಂದೆ ಇಡಲಿ. ಬಿ. ಕೆ. ಹ್ರಂಖಾಲ್ ಮುಂತಾದ ಉಗ್ರಗಾಮಿಗಳ ಮೇಲಿನ ಕೆಲವು ಕೇಸುಗಳು ಮುಂದುವರೆಯುತ್ತಿವೆ. ಒಂದು ಕೇಸನ್ನು ಮಾತ್ರ ಹಿಂತೆಗೆದುಕೊಳ್ಳಲಾಗಿದೆ. ಯಾವ ರಾಜಕೀಯ ಒಪ್ಪಂದವನ್ನೂ ಮಾಡಿಕೊಂಡಿಲ್ಲ. ನಮ್ಮ ಮೇಲೆ ಆನಂದ ಮಾರ್ಗಿಗಳು ಮಾಡಿರುವ ಆಪಾದನೆಯನ್ನೇ ಗೃಹಮಂತ್ರಿಗಳೂ ಮಾಡಿರುವುದು ದುರದೃಷ್ಟಕರ. ಬುಡಕಟ್ಟಿನವರ ಜಮೀನುಗಳನ್ನು ಬುಡಕಟ್ಟಿನವರಲ್ಲದವರು ಆಕ್ರಮಿಸಿಕೊಂಡಿರುವುದು ಹಳೆಯ ಸಂಗತಿ. ಇದನ್ನು ಮತ್ತೆ ಮರಳಿಸುವ ತೀರ್ಮಾನವನ್ನು 1974ರಲ್ಲಿ ಕಾಂಗ್ರೆಸ್ ಸರ್ಕಾರವೇ ತೆಗೆದುಕೊಂಡಿತ್ತು. ವಾಮರಂಗ ಸರ್ಕಾರ ಈ ತೀರ್ಮಾನವನ್ನು ಜಾರಿಗೊಳಿಸುತ್ತಿದೆಯಷ್ಟೆ ಎಂದು ಮುಖ್ಯಮಂತ್ರಿಗಳು ಹೇಳಿದರು.

ಗೃಹಮಂತ್ರಿಗಳ ಹೇಳಿಕೆ ಪ್ರತಿಗಾಮಿಗಳಿಗೆ ಸಹಾಯ ಮಾಡುತ್ತದೆ. ನಮ್ಮ ದುರಾದೃಷ್ಟಗಳನ್ನು ಅವರು ತಮ್ಮ ಪಕ್ಷದ ರಾಜಕೀಯ ಆಸಕ್ತಿಗಳಿಗೆ ಬಳಸಿಕೊಳ್ಳದಿರಲಿ. ತ್ರಿಪುರದ ಈ ಬಿಕ್ಕಟ್ಟಿನ ಗಳಿಗೆಯಲ್ಲಿ ಪ್ರಜಾಪ್ರಭುತ್ವ ರಕ್ಷಣೆಗೆ ಮುಂದಾಗಲಿ ಎಂದು ನೃಪೇನ್ ಆಶಿಸಿದ್ದಾರೆ.

ಹಿಂದುಳಿದವರ ಶೋಷಣೆ ರಾಯಚೂರು ಎಸ್ ಎಫ್ ಐ ಪ್ರತಿಭಟನೆ

ಹಿಂದುಳಿದ ವರ್ಗ ಮತ್ತು ಜಾತಿಗಳವರಿಗೆ ಆದಾಯ ಸರ್ಟಿಫಿಕೇಟನ್ನು ನೀಡುವಾಗ ಸರ್ಕಾರಿ ಕಛೇರಿಯವರು ಪಡೆಯುತ್ತಿದ್ದ 20-25ರೂ. ಹಣದ ಶೋಷಣೆಯ ವಿರುದ್ಧ ರಾಯಚೂರು ಎಸ್. ಎಫ್. ಐ. ಘಟಕವು ಇತ್ತೀಚೆಗೆ ಪ್ರತಿಭಟನೆ ನಡೆಸಿತು, ನೋಟರಿ ಅಧಿಕಾರಿಗಳನ್ನು ಘೆರಾವೊ ಮಾಡಿತು, ಜಿಲ್ಲಾಧಿಕಾರಿಗಳನ್ನು ಕಂಡು ಈ ಶೋಷಣೆಯನ್ನು ತಡೆಗಟ್ಟಬೇಕೆಂಬ ಮನವಿ ಅರ್ಪಿಸಿದರು. ನಿಗದಿಪಡಿಸಿರುವ ಹಣವನ್ನು ಮಾತ್ರ ತೆಗೆದುಕೊಳ್ಳಬೇಕೆಂದು ಜಿಲ್ಲಾಧಿಕಾರಿಗಳು ಸಂಬಂಧಪಟ್ಟವರಿಗೆ ಆದೇಶವಿತ್ತರು.

ಎಸ್. ಎಫ್. ಐ. ನ ಈ ಹೋರಾಟಕ್ಕೆ ರಾಯಚೂರು ನಗರದ ಎಲ್ಲಾ ವಕೀಲರೂ ಪ್ರೋತ್ಸಾಹ ನೀಡಿದರು.

ಜೂನ್ 14ರಂದು ನಡೆದ ಈ ಪ್ರತಿಭಟನೆಯ ನಾಯಕತ್ವವನ್ನು ಲಿಂಗಪ್ಪಪೂಜಾರ್, ಬಸವರಾಜ ಮತ್ತು ಮಲ್ಲಿಕಾರ್ಜುನ ವಹಿಸಿದ್ದರು.

ಹರಿಜನರ ಮೇಲಿನ ಒಂದು ಹಲ್ಲೆಯ ವರದಿ

‘ಇಲ್ಲೇ ನಾಗನಾಯಕನಕೋಟೆ ಎಂಬ ಹಳ್ಳಿಯಲ್ಲಿ ಬೆಂಗಳೂರು ಜಿಲ್ಲಾ ರೈತಸಂಘದ ಸದಸ್ಯ ಗೋಪಾಲನ ಮೇಲೆ ಊರ ಗೌಡರು ಹಲ್ಲೆ ಮಾಡಿದ್ದಾರೆ. ಅದನ್ನು ‘ಐಕ್ಯರಂಗ’ಕ್ಕೆ ವರದಿ ಮಾಡಬೇಕಲ್ಲ’ ಎಂಬ ಬೇಡಿಕೆಯನ್ನು ಬೆಂಗಳೂರು ಜಿಲ್ಲಾ ರೈತ ಸಂಘದ ಸಹಕಾರ್ಯದರ್ಶಿಯಾಗಿರುವ ಗೆಳೆಯ ಮನೋಹರ್ ನನ್ನ ಮುಂದಿಟ್ಟರು. ಅವರ ಜೊತೆಯಲ್ಲಿ ಮೂರು-ನಾಲ್ಕು ಜನ ಬಡ ರೈತರಿದ್ದರು. ಅವರನ್ನು ಹಿಂಬಾಲಿಸಿಕೊಂಡು ಹೊರಟೆ. ಮಧ್ಯಾಹ್ನ ಒಂದು ಗಂಟೆಯ ಸುಡುಬಿಸಿಲು. ಬೆಂಗಳೂರಿನ ಸಿಟಿ ಮಾರ್ಕೆಟ್ ಪ್ರದೇಶದಲ್ಲಿ ಎಂದಿನಂತೆ ಜನಸಂದಣಿ,

ಕೋತಿ, ಗಿಣಿ ಮತ್ತು ಇತರೆ ಪ್ರಾಣಿಗಳ ಹಾವಳಿಯನ್ನು ತಪ್ಪಿಸಿ, ಮಳೆಬಿಸಿಲುಗಳನ್ನು ಲೆಕ್ಕಿಸದೆ ಬೆವರು ಸುರಿಸಿ ಬೆಳೆದು ತಂದಿದ್ದ ತಮ್ಮ ತರಕಾರಿಗೆ ಸರಿಯಾದ ಬೆಲೆ ಸಿಕ್ಕಲಿಲ್ಲವೆಂದು ಬಸ್‌ಗಾಗಿ ಕಾಯುತ್ತ ನಿಂತಿದ್ದ ಮೂವರು ರೈತರು ಮಾತನಾಡಿಕೊಳ್ಳುತ್ತಿದ್ದರು. ಮಗುವೊಂದನ್ನು ಕರೆದುತಂದಿದ್ದ ಅಜ್ಜನೊಬ್ಬ ಕಾರಾಸೇವೆ ಪೊಟ್ಟಣವನ್ನು ಬಿಚ್ಚಿ ಮಗುವಿಗೆ ಕೊಟ್ಟ-ತಾನು ಮಾತ್ರ ಸ್ವಲ್ಪವನ್ನೇ ತಿಂದ. ಅಷ್ಟರಲ್ಲಿ ಕಪ್ಪು ಕೋಟು ಧರಿಸಿಕೊಂಡು ಮೋಟಾರ್ ಸೈಕಲ್‌ನಲ್ಲಿ ನಮ್ಮ ಬಳಿಗೆ ಬಂದವರನ್ನು ವಕೀಲರೆಂದು ಗುರುತಿಸುವುದು ನನಗೆ ಕಷ್ಟವಾಗಲಿಲ್ಲ. ಅವರ ಜೊತೆಗೆ ಮತ್ತೊಬ್ಬ ಯುವಕನಿದ್ದ. ‘ಹಳ್ಳಿಯಲ್ಲಿ ನಡೆದಿರುವ ಹಲ್ಲೆಯ ಬಗ್ಗೆ ಮೇಲಧಿಕಾರಿಗಳಿಗೆ ದೂರು ಕೊಡೋಣ. ಡಿ. ಐ. ಜಿ. ಯವರನ್ನು ನೋಡೋಣ ಬನ್ನಿ ಎಂದು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ ಕಛೇರಿಗೆ ನಮ್ಮನ್ನು ಬರುವಂತೆ ಹೇಳಿದರು. ಕುಟುಕುಟು ಶಬ್ದ ಮಾಡುತ್ತಾ ಅವರ ವಾಹನ ಹೊರಟು ಹೋಯಿತು. ಐ. ಜಿ. ಪಿ. ಆಫೀಸ್ ಕಡೆಗೆ ಹೆಜ್ಜೆ ಹಾಕಿದರು, ರೈತರು. ನಾನು ಹಿಂಬಾಲಿಸುತ್ತಿದ್ದೆ. ಸಿಲ್ವರ್‌ಜ್ಯುಬ್ಲಿ ಪಾರ್ಕ್ ರಸ್ತೆಯಲ್ಲಿ ಹಾದುಹೋಗುವಾಗ ನನಗೆ ಪರಿಚಯವಿದ್ದ ರೈತರೊಬ್ಬರು ಅಂಗಡಿಯೊಂದರಲ್ಲಿ ಕಾಣಿಸಿದರು. ಹೋದೆ ರೈತರಿಗೆ ಬೇಕಾಗುವ ಪಂಪ್‌ಸೆಟ್ ಮತ್ತಿತರ ವ್ಯವಸಾಯ ಉಪಕರಣಗಳನ್ನು ಮಾರಾಟಮಾಡುವ ಅಂಗಡಿ ಅದಾದಿತ್ತು. ತಾರ್ಸಿ ಬಿಲ್ಡಿಂಗ್‌ನ ಆ ಅಂಗಡಿಯ ಸೀಲಿಂಗ್ ಫ್ಯಾನ್ ತಿರುಗುತ್ತಿತ್ತು. ಅಂಗಡಿ ಮಾಲೀಕರು ಕುಳಿತಿದ್ದ ಕುರ್ಚಿಯ ಪಕ್ಕದಲ್ಲಿದ್ದ ಟೇಬಲ್ ಫ್ಯಾನಿನ ಗಾಳಿಗೆ ಎದುರಾಗಿ ನಿಂತ ನನಗೆ ಪರಿಚಿತವಿದ್ದ ರೈತರು ಪಂಪ್‌ಸೆಟ್ ಖರೀದಿಗಾಗಿ ಚೌಕಾಸಿಮಾಡುತ್ತಿದ್ದರು. ‘ಚೌಕಾಸಿ-ಗಿವ್‌ಕಾಸಿ ಏನು ನಮ್ಮವ ಇಲ್ಲ ಗೌಡ್ರೆ. ಒಂದೇ ರೇಟು. ಪದಾರ್ಥನೂ ಚೆನ್ನಾಗಿರ್ತದೆ. ಗೌರ್‌ಮೆಂಟ್‌ಗೆ ಕೊಡೊ ಟ್ಯಾಕ್ಸ್ ಎಲ್ಲ ಸೇರಿ ನಾಲ್ಕುಸಾವಿರದ ನೂರಐವತ್ತಾರ್ ರೂಪಾಯರ್ ಬೀಳ್ತದೆ ನೋಡಿ’ ಎಂದು ಮಾತು ಮುಗಿಸಿದ ಮಾಲೀಕ. ಫೋನ್ ಕರೆಯೊಂದು ಬಂತು. ರಿಸೀವರ್ ಕೈಗೆತ್ತಿಕೊಂಡು ಮಾತನಾಡಿದರು ಮಾಲೀಕರು. ವ್ಯಾಪಾರಕ್ಕೆ ಸಂಬಂಧಪಟ್ಟ ಮಾತುಗಳೇ ಜಾಸ್ತಿ. ತುಂಬಾ ಬೇಜಾರಾಗಿದೆ ನಾಳೆ ಹೇಗೂ ಭಾನುವಾರ. ಒಳ್ಳೆ ಹೋಟೆಲೊಂದಕ್ಕೆ ಊಟಕ್ಕೆ ಹೋಗೋಣ. ಚೆನ್ನಾಗಿ ಬೀರ್ ಕುಡಿದು ಸ್ವಲ್ಪ ಹೊತ್ತು ಹಾಯಾಗಿ ಕಾಲಕಳೆಯೋಣ ಎಂದು ಹಿಂದಿ ಭಾಷೆಯಲ್ಲಿ ಆಹ್ವಾನಿಸಿ ರಿಸೀವರ್ ಅನ್ನು ಕೆಳಗಿಟ್ಟ ಮಾಲೀಕರು ಎದುರಿಗೆ ಕುಳಿತ ಗೌಡರತ್ತ ನೋಡಿದರು. ಚೆಡ್ಡಿಜೇಬಿನಿಂದ ದುಡ್ಡು ತೆಗೆದ ಗೌಡರು ‘ನಾಲ್ಕ್‌ಸಾವಿರದ್ ನೂರ್‌ಐವತ್ತ್ರದೆ ಸಾವ್ಕಾರ್ರೆ’ ಎಂದರು. ಸ್ವಲ್ಪ ಹೊತ್ತು ಗೌಡರನ್ನು ದಿಟ್ಟಿಸಿದ ಮಾಲೀಕರು ಹಣವನ್ನು ಕೈಗೆತ್ತಿಕೊಂಡು ಎಣಿಸಲು ಮುಂದಾದರು. ಎಣಿಸುತ್ತಲೇ ಪಂಪ್‌ಸೆಟ್ ಮತ್ತು ಪೈಪ್‌ಗಳನ್ನು ಪ್ಯಾಕ್ ಮಾಡುವಂತೆ ತಮ್ಮ ಕೆಲಸದ ಹುಡುಗರಿಗೆ ಆಜ್ಞೆಮಾಡಿದರು.

‘ಬ್ಯಾಂಕಿಗೆ ಬಡ್ಡಿಕಟ್ಟಿ ಸಾಲತಂದು, ಅಂಗಡಿ ಮಾಲೀಕರು ಹೇಳಿದಷ್ಟು ಬೆಲೆಕೊಟ್ಟು, ಸರ್ಕಾರಕ್ಕೂ ತೆರಿಗೆ ಕೊಟ್ಟು ನಮ್ಮದೇ ಬಸ್‌ಚಾರ್ಜ್ ಹಾಕ್ಕೊಂಡು ಊರಿಗೆ ತಕ್ಕೊಂಡ್ ಹೋಗಿ-ಅಲ್ಲಿ ಭೂಮಿಗೆ ಕಂದಾಯ ಕಟ್ಟಿ ಮಕ್ಕಳ್ನ ಸಾಕ್ದಂಗೆ ಬೆಳೆ ಸಾಕಿ ಮತ್ತೆ ನಮ್ದೆ ಬಸ್‌ಚಾರ್ಜ್ ಹಾಕ್ಕಂಡು ಪ್ಯಾಟೆಗೆ ತಂದು ವ್ಯಾಪಾರ್‌ಗಾರ್ರು ಕೇಳ್ದಷ್ಟ್ ಬೆಲೆಗೆ ಕೊಟ್ ಹೋಗೋ ಬದುಕು ನಮ್ದು. ನಿವಾರ ಪ್ಯಾಟೆಗೆ ಸೇರಿದ್ದಿ. ಚೆಂದಾಗಿ ಬದಕಪ್ಪ’ ಎಂದು ತಮ್ಮ ಕಷ್ಟ ಹೇಳಿಕೊಂಡು ನನ್ನ ಮೇಲೆ ಆ ರೈತ ತೋರಿದ ಪ್ರೀತಿಗೆ ನನ್ನ ಬಾಯಿ ಕಟ್ಟಿಬಂತು. ನನಗೆ ಅರ್ಜೆಂಟ್ ಕೆಲಸವಿದೆ ಎಂದು ಹೇಳಿ ಅವರ ಯೋಗಕ್ಷೇಮ, ಅವರ ಹಳ್ಳಿಯ ಮಳೆಬೆಳೆ ವಿಚಾರಿಸಿ ಮುಂದು ಹೊರಟೆ.

ರೈತರನ್ನು ಬರಹೇಳಿದ್ದ ವಕೀಲರು ನೋಡಬೇಕೆಂದಿದ್ದ ಮೇಲಧಿಕಾರಿ ಡಿ. ಐ. ಜಿ. ತಮ್ಮ ಕಛೇರಿಯಲ್ಲಿರಲಿಲ್ಲ. ನಾಗನಾಯಕನ ಕೋಟೆಗೆ ಹೋಗುವ ಬಸ್ಸಿಡಿದು ನಾವು ಹೊರಟೆವು. ರಾತ್ರಿ ಎಂಟು ಗಂಟೆಗೆ ಊರು ತಲುಪಿದೆವು. ಕಂಬಳಿ ಹೊದ್ದುಕೊಂಡು ಬೀಡಿ ಸೇದುತ್ತಾ ಬಂದು, ರೈತ ರಾಜಣ್ಣನವರ ಮನೆಯಲ್ಲಿ ಸೇರಿದರು ಹಲವಾರು ಮಂದಿ.

ತುಂಡು ಭೂಮಿಗಾಗಿ 20 ವರ್ಷ ಪ್ರಯತ್ನ :

ಅವರೇ ಹೇಳಿದಂತೆ ಅವರೆಲ್ಲ ಆ ಹಳ್ಳಿಯಲ್ಲಿ ಕೂಲಿನಾಲಿ ಮಾಡಿ ಬದುಕುತ್ತಿರುವ ಬೇಸಾಯ ಕೂಲಿಗಾರರು. ಹುಟ್ಟಿನಿಂದ ಮತ್ತು ಬಾಳುತ್ತಲೂ ಇವರೆಲ್ಲ ಹರಿಜನರು. ತಮ್ಮದೆಂಬ ಸ್ವಂತ ಭೂಮಿಗಾಗಿ ಕಳೆದ 20 ವರ್ಷಗಳಿಂದ ಊರ ಗೌಡರನ್ನು ನಂಬಿದ್ದರು. ಅವರ ಮನೆಬಾಗಿಲನ್ನು ಕಾದರು. ಪ್ರತಿ ಚುನಾವಣೆಯ ಸಮಯದಲ್ಲೂ ಊರ ಗೌಡರು ಎಲ್ಲ ಕಾಂಗ್ರೆಸ್ಸಿಗರಂತೆ ಇವರೂ ಆಶ್ವಾಸನೆ ಕೊಡುತ್ತಾ ಹೋದರು. ಆದರೆ ನಿಲ್ಲಲು ತಮ್ಮದೆಂಬ ಸ್ವಂತ ನೆಲೆ ಈ ನತದೃಷ್ಟ ಹರಿಜನರಿಗೆ ಆಗಲಿಲ್ಲ.

ರೈತ ಸಂಘ :

ಊರಿನ ಪಕ್ಕದಲ್ಲಿದ್ದ ರಾಮಸ್ವಾಮಿಪಾಳ್ಯದ ತರುಣ ಮನೋಹರ ಹರಿಜನರ ಸಮಸ್ಯೆಯನ್ನು ಅರ್ಥಮಾಡಿಕೊಂಡ. ಅವರ ಕಷ್ಟ ಕಂಡು ಮರುಗಿದ. ಹೋರಾಟದ ಮೂಲಕ ಇವರಿಗೆ ನ್ಯಾಯ ದೊರಕಿಸಿಕೊಡಬಹುದೆಂಬ ತೀರ್ಮಾನಕ್ಕೆ ಬಂದ ತನ್ನ ವಿದ್ಯಾರ್ಥಿ ದಿಸೆಯಲ್ಲಿ ಸ್ಟೂಡೆಂಟ್ಸ್ ಫೆಡರೇಷನ್ ಆಫ್ ಇಂಡಿಯ, ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಈತನಲ್ಲಿ ತಮ್ಮ ಪ್ರಭಾವ ಬೀರಿದ್ದವು. ಹೋರಾಟದ ಪಥವೇ ಪ್ರತಿಫಲ ನೀಡುವ ಪಥ ಎಂಬ ತೀರ್ಮಾನಕ್ಕೆ ಬರುವಂತೆ ಈತನನ್ನು ಆ ಸಂಸ್ಥೆಗಳು ಮಾಡಿದ್ದವು.

ಹಳ್ಳಿಯ ಬಡರೈತರು ಮತ್ತು ಬೇಸಾಯ ಕೂಲಿಗಾರರಾದ ಹರಿಜನರಿಗೆ ಸ್ಥಿತಿಯಹೇಳಿ, ನಾಗನಾಯಕನ ಕೋಟೆಯ ಸಮೀಪದಲ್ಲೇ ಇದ್ದ ಸರ್ಕಾರಿ ಭೂಮಿಯನ್ನು ಉಳುವಂತೆ ಅವರನ್ನು ರೈತಸಂಘ ತಯಾರು ಮಾಡಿತು. ರೈತ – ಕೂಲಿಕಾರರು ಆರೆಂಟು ಎಕರೆ ಸರ್ಕಾರಿ ಭೂಮಿಯನ್ನು ಉತ್ತರು. ಕಳೆದ ಎರಡು ವರ್ಷ ಹುರುಳಿ ಬೆಳೆಯನ್ನೂ ಸ್ವಲ್ಪ ಪ್ರಮಾಣದಲ್ಲಿ ಪಡೆದರು.

ಊರ ಗೌಡರ ಅಳಿಯನಿಂದ ಹಲ್ಲೆ :

ಈ ವರ್ಷ ಮಳೆ ಬಿದ್ದಾಗ ಎಂದಿನಂತೆ ಹರಿಜನ ಕೂಲಿಗಾರರು ಅವರಿವರ ಎತ್ತು ನೇಗಿಲುಗಳನ್ನು ಎರವಲು ಪಡೆದು ತಾವು ಈಗಾಗಲೇ ಉತ್ತಿದ್ದ ಆರೆಂಟು ಎಕರೆ ಭೂಮಿಯನ್ನು ಉಳುವುದಕ್ಕೆ ಹೊರಟರು. ಊರಗೌಡರ ಅಳಿಯ ಸಂಪಂಗಿ ಮತ್ತು ಆತನ ಮಗ ಮುನಿರಾಜು ಎಂಬುವರು ಬಂದು ಹರಿಜನರನ್ನು ಹೊಲ ಉಳದಂತೆ ತಡೆದರು. ‘ಯಾರಪ್ಪನದು ಈ ಜಮೀನೆಂದು’ ಪ್ರಶ್ನಿಸಿದರು. ನಡೆಯುತ್ತಲಿದ್ದ ಜಗಳವನ್ನು ಬಿಡಿಸಲು ಬಂದ ಪಕ್ಕದ ಜಮೀನಿನ ತರುಣರೈತ ಗೋಪಾಲನನ್ನು ಕೊಲ್ಲುವ ಪ್ರಯತ್ನ ಮಾಡಿ ಆತನ ಮೇಲೆ ಬಾಕು ಎತ್ತಿದರು ಗೌಡರ ಮನೆಯ ಕಡೆಯವರು. ಅಷ್ಟರೊಳಗೆ ಅಲ್ಲಿ ಜಮಾಯಿಸಿದ್ದ ಅಕ್ಕಪಕ್ಕದ ರೈತ-ಕೂಲಿಗಾರರು ಬಾಕುವನ್ನು ಕಸಿದುಕೊಂಡರು. ಅಜ್ಜಿ ಅಣ್ಣಮ್ಮ ಬಾಕುವನ್ನು ಕಿತ್ತುಕೊಂಡು ‘ಪ್ರಾಣ ಕಳಿಯಾಕ್ ಮಾಡಿದ್ದಿರಾ ಪೋಕರಿಗಳಾ’ ಎಂದು ತನ್ನ ಮನೆಯತ್ತ ಬಾಕುವನ್ನು ಹಿಡಿದು ಹೊರಟಳು. ರೈತಸಂಘದ ನಾಯಕ ಮನೋಹರನಿಗೆ ಬಾಕು ಒಪ್ಪಿಸಿ ನಡೆದ ಘಟನೆಯನ್ನು ವಿವರಿಸಿದಳು.

ಮೇಲ್ಜಾತಿಯವರ ಮೇಲೆ ದೂರು! ಘಾಸಿಯಾದ ದಲಿತರ ಮನ ;

ಸ್ವಲ್ಪವೇ ಬುದ್ಧಿವಂತರಾದ ಊರ ಗೌಡರು ಹರಿಜನರ ಮೇಲೆ ಯಾವುದೇ ದೂರು- ಅರ್ಜಿ ಮಾಡಿದರೂ ಅಷ್ಟಾಗಿ ಕಚ್ಚುವುದಿಲ್ಲ ಎಂಬುದನ್ನು ಅರಿತೋ ಏನೋ, ಈ ಜಮೀನು ವ್ಯವಹಾರಕ್ಕೆ ಸಂಬಂಧಪಡದೇ ಇದ್ದ ಮೇಲ್ಜಾತಿಗೆ ಸೇರಿದ ದೇವೀರಪ್ಪ, ರಾಮಣ್ಣ, ಗೋಪಾಲ್ ಮತ್ತು ತಿಮ್ಮೇಗೌಡ ಎಂಬ ಬಡ ರೈತರ ಮೇಲೆ ಪೋಲೀಸ್ ಸ್ಟೇಶನ್‌ಗೆ ದೂರು ನೀಡಿದರು. ಆದರೆ ಇವರು ಒಂದು ದಿವಸ ತಡವಾಗಿ ದೂರು ನೀಡಿದರು. ಹಲ್ಲೆ ನಡೆದ ದಿವಸವೇ ಹರಿಜನರು ಹೊಸಕೋಟೆ ತಾಲ್ಲೂಕಿನ ಕಾಡುಗೋಡಿ ಪೋಲೀಸ್ ಠಾಣೆಗೆ ದೂರು ನೀಡಿ ಪೋಲೀಸರು ಅಪರಾಧಿಗಳ ಮೇಲೆ ತೆಗೆದುಕೊಳ್ಳಬಹುದಾದ ಕ್ರಮವನ್ನು ಎದುರು ನೋಡುತ್ತಾ ಕುಳಿತರು. ಮಾರನೆಯ ದಿನ ಪೋಲೀಸರು ತಮ್ಮೂರಿಗೆ ಬರಲಿಲ್ಲ. ಊರ ಗೌಡರು ದೂರು ನೀಡಿದ ಮಾರನೆಯ ದಿನ ಅಂದರೆ ಜೂನ್ 20 ರಂದು ಪೋಲೀಸ್ ಪೇದೆಯೊಬ್ಬ ನಾಗನಾಯಕನ ಹಳ್ಳಿಗೆ ಬಂದ. ಹಲ್ಲೆಗೆ ಒಳಗಾದವರನ್ನು ಮತ್ತು ಜಗಳದಿಂದ ಊರ ಜನರನ್ನು ರಕ್ಷಿಸಲು ಹೋದ ಬಡರೈತ ರಾಮಣ್ಣ, ಗೋಪಾಲ್, ತಿಮ್ಮೇಗೌಡ ಮತ್ತು ದೇವೀರಪ್ಪನವರನ್ನು ಪೋಲೀಸ್ ಠಾಣೆಗೆ ಬರುವಂತೆ ಕರೆದ! ಲಿಖಿತ ಆಜ್ಞೆಯನ್ನು ತರುವವರೆಗೆ ಪೋಲೀಸ್ ಠಾಣೆಗೆ ಬರುವುದಿಲ್ಲವೆಂದು ರೈತರು ಹೇಳಿ ಕಳುಹಿಸಿದ್ದಾರೆ.

‘ತಾವು ಉತ್ತಿದ್ದು, ತಮ್ಮ ಮೇಲೆ ಹಲ್ಲೆ ಮಾಡಿದ್ದು, ತಮ್ಮಂತಹ ಕೀಳು ಜಾತಿಯವರನ್ನು, ಬಡ ಹರಿಜನರನ್ನು ರಕ್ಷಿಸಲು ಬಂದ ರೈತಸಂಘದ ಮತ್ತು ಉತ್ತಮ ಕುಲದವರ ಮೇಲೆ ಊರ ಗೌಡರು ಅನ್ಯಾಯವಾಗಿ ದೂರು ನೀಡಿದ್ದಾರೆ. ಇದರಿಂದ ನಮ್ಮ ಮನಸ್ಸಿಗೆ ಘಾಸಿಯಾಗಿದೆ, ಈ ನೋವು ಹೋಗುವವರೆಗೆ ನಮಗೆ ನೆಮ್ಮದಿಯಿಲ್ಲ ಸ್ವಾಮಿ’ ಎಂದು ನನ್ನೆದುರು ದೈನ್ಯದಿಂದ ಹೇಳಿಕೊಂಡ ದಲಿತರ ಮುಂದೆ ನನ್ನ ಬಾಯಿ ಕಟ್ಟಿತು. ನಮಸ್ಕರಿಸಿ ವಾಪಸಾದೆ.

—ಶಂಕರಲಾಳಾಪುರ

○

ರಾಯಚೂರಿನಲ್ಲಿ ಎಸ್. ಎಫ್. ಐ ಸಭೆ :
ಬೇಡಿಕೆ ಈಡೇರಿಕೆಗೆ ಕಾರ್ಯಕ್ರಮ

1980-81ನೇ ಸಾಲಿನ ಶೈಕ್ಷಣಿಕ ದಿನಗಳು ಆರಂಭವಾಗುತ್ತಿರುವ ಸಮಯದ ಆರಂಭದಲ್ಲೇ ರಾಯಚೂರು ಎಸ್. ಎಫ್. ಐ. ಘಟಕದ ಸರ್ವಸದಸ್ಯರ ಸಭೆ ಸೇರಿ ವಿದ್ಯಾರ್ಥಿಗಳ ಕೆಳಕಂಡ ಬೇಡಿಕೆಗಳ ಈಡೇರಿಕೆಗಾಗಿ ಕಾರ್ಯಕ್ರಮ ಹಾಕಿಕೊಂಡು ಹೋರಾಟ ಮಾಡಬೇಕೆಂದು ತೀರ್ಮಾನಿಸಲಾಯಿತು.

ಸಭೆಯ ಅಧ್ಯಕ್ಷತೆಯನ್ನು ಕಾಂ. ಚಂದ್ರಶೇಖರ ಬಾಳೆ ಅವರು ವಹಿಸಿದ್ದರು.

ಸರ್ಕಾರದ ಮುಂದೆ ಎಸ್. ಎಫ್. ಐ. ಬೇಡಿಕೆಗಳು :

ಏರುತ್ತಿರುವ ಜನಸಂಖ್ಯೆಯ ಪ್ರಮಾಣಕ್ಕನುಗುಣವಾಗಿ ಶಾಲೆಗಳನ್ನು ಸರ್ಕಾರವೇ ಆರಂಭಿಸಬೇಕು.

ಸರ್ವರಿಗೂ ಉಚಿತ ಹಾಗೂ ಕಡ್ಡಾಯ ಶಿಕ್ಷಣ, ಇಂದಿನ ಶಿಕ್ಷಣ ಪದ್ಧತಿಯ ಆಮೂಲಾಗ್ರ ಬದಲಾವಣೆ.

ವಂತಿಗೆ, ಶಿಕ್ಷಣ ಶುಲ್ಕ ಮುಂತಾದುವುಗಳ ಮೂಲಕ ವಿದ್ಯಾರ್ಥಿಗಳ ಶೋಷಣೆ ನಿರ್ಮೂಲನ ಮಾಡಲು ಖಾಸಗಿ ಶಾಲಾಕಾಲೇಜುಗಳನ್ನು ಸರ್ಕಾರ ವಹಿಸಿಕೊಳ್ಳಬೇಕು. ಕೈಗಾರಿಕಾ ತರಬೇತಿ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಉಚಿತ ಹಾಸ್ಟೆಲ್ ಸೌಲಭ್ಯವನ್ನು ಒದಗಿಸಬೇಕು.

ಶಿಕ್ಷಣ ಕ್ಷೇತ್ರದ ಆಡಳಿತ ನಿರ್ವಹಣೆಯಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಲು ಅವಕಾಶ ಒದಗಿಸಬೇಕು.

ಈ ಬೇಡಿಕೆಗಳ ಬೆಂಬಲಾರ್ಥ ಸಹಿಸಂಗ್ರಹ ಕಾರ್ಯಕ್ರಮವಮಾಡಿ ಮನವಿಪತ್ರಗಳನ್ನು ಎಲ್ಲಾ ಶಿಕ್ಷಣ ಕೇಂದ್ರಗಳಿಗೆ, ಜಿಲ್ಲಾಧಿಕಾರಿಗಳಿಗೆ, ಜಿಲ್ಲಾ ವಿದ್ಯಾಧಿಕಾರಿಗಳಿಗೆ ಮತ್ತು ಸಂಬಂಧಪಟ್ಟ ಇತರೆ ಅಧಿಕಾರಿಗಳಿಗೆ ಅರ್ಪಿಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು, ಕಾಂ. ಲಿಂಗಪ್ಪ ಪೂಜಾರಿ ವಂದಿಸಿದರು. ●

ಕಾರ್ಮಿಕರಿಗೆ ಬೆಂಬಲ

ಕೃಷ್ಣರಾಜಪುರದ ಮೆಗ್ನೀಷಿಯಂ ಪ್ರಾಡಕ್ಟ್ಸ್ ಕಾರ್ಮಿಕರ ದೀರ್ಘ ಹೋರಾಟಕ್ಕೆ ಬೆಂಬಲ ಸೂಚಿಸಲು, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರು ಕಾಂ. ರಾಜನ್ ಅವರ ಮುಖಂಡತ್ವದಲ್ಲಿ ಕಾರ್ಮಿಕರ ಮನೆಗಳಿಗೆ ಹೋಗಿ ಹೋರಾಟದ ಸ್ಥಿತಿಗತಿಗಳನ್ನು ತಿಳಿಸಿದರು. ನಂತರ ಸಂಗ್ರಹಿಸಲಾಗಿದ್ದ 142 ರೂಪಾಯಿಗಳು ಮತ್ತು 26 ಕೆ. ಜಿ. ಅಕ್ಕಿಯನ್ನು ಕಾರ್ಮಿಕರಿಗೆ ಹಂಚಲಾಯಿತು. ●

ಅಸ್ಸಾಂ ಸಮಸ್ಯೆಯ ಪರಿಹಾರಕ್ಕೆ ಪೊಲಿಟ್‌ಬ್ಯೂರೋ ಸಲಹೆಗಳು

(ಒಂದನೇ ಪುಟದಿಂದ)

ಸಂಖ್ಯಾತ ವಿರೋಧಿಯಾದ ಮತ್ತು ವಿದೇಶಿ ವಿರೋಧಿಯಾದ ಭಾವನೆಗಳನ್ನು ಕೆರಳಿಸುವುದು ಈ ನಿಜವಾದ ಉದ್ದೇಶವನ್ನು ಮರೆಮಾಚಿ, ಅಸ್ಸಾಂನ ಪ್ರತ್ಯೇಕತಾ ಚಳುವಳಿಗೆ ಬೇಕಾದ ಮಾನಸಿಕ ತಳಹದಿಯನ್ನು ನಿರ್ಮಿಸುವುದಕ್ಕಾಗಿ.

ಆದ್ದರಿಂದಲೇ ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರ ಮೇಲೆ ಚಳುವಳಿ ಹಲ್ಲೆ ಮಾಡುತ್ತಿದ್ದು, ಅವರನ್ನು ಅಸ್ಸಾಂ ನೆಲದಿಂದ ಹೊರದೂಡಲು ಉದ್ದೇಶಿಸಿದೆ. ಅಸ್ಸಾಂ ಪೋಲೀಸರು ಅಲ್ಪಸಂಖ್ಯಾತರ ಮೇಲೆ ಗೋಲಿಬಾರು ಮಾಡುತ್ತಿದ್ದಾರೆ. ಮೇ 26ರಂದು ಅಲ್ಪಸಂಖ್ಯಾತರು ತಮ್ಮ ಮೊದಲ ಪ್ರದರ್ಶನ ನಡೆಸಿದಾಗ ಪೋಲೀಸ್ ಗೋಲಿಬಾರಿನಲ್ಲಿ ನೂರಕ್ಕೂ ಹೆಚ್ಚು ಮಂದಿ ಸತ್ತರು. ಚಳುವಳಿಯಿಂದ ಪ್ರಭಾವಿತರಾದ ಬೆಂಬಲಿಗರು ಅಲ್ಪಸಂಖ್ಯಾತರ ಸಾಮೂಹಿಕ ಕೊಲೆ ನಡೆಸುತ್ತಿದ್ದಾರೆ. ಕಳೆದ ಕೆಲವು ತಿಂಗಳಲ್ಲಿ ನೂರಾರು ಮುಸ್ಲಿಮರ ಮತ್ತು ಹಿಂದೂ ಬಂಗಾಲಿಗಳ ಹತ್ಯೆಯಾಗಿದೆ. ಸಾವಿರಾರು ಜನರು ನಿರಾಶ್ರಿತ ಶಿಬಿರಗಳಲ್ಲಿದ್ದು ಭಯದಿಂದ ಜೀವಿಸುತ್ತಿದ್ದಾರೆ.

ಈ ಹತ್ಯೆಗಳು, ಭಾರತೀಯ ಐಕ್ಯತೆಗೆ ಸವಾಲು, ಇವೆಲ್ಲಕ್ಕೂ ಕಾಂಗ್ರೆಸ್ ಸರ್ಕಾರ ಮತ್ತು ಅದರ ಹಿಂದಿನ ನೀತಿಗಳೇ ಹೊಣೆ ಎಂದು ಸಿ.ಪಿ.ಎಂ. ಭಾವಿಸುತ್ತದೆ. ಏಕೆಂದರೆ ಅಸ್ಸಾಂ ಜನತೆಯ ನ್ಯಾಯವಾದ ಅಸಮಾಧಾನವನ್ನು ರಾಷ್ಟ್ರವಿರೋಧಿ ದಿಕ್ಕಿಗೆ ತಿರುಗಿಸಲಾಗಿದೆ. ಕೇಂದ್ರಸರ್ಕಾರದ ಕೈಯಲಿ ಅಧಿಕಾರದ ಕೇಂದ್ರೀಕರಣ, ರಾಜ್ಯಗಳನ್ನು ಕೇಂದ್ರದ ಕೈಕೆಳಗಿನ ಪಾಳೇಗಾರಿಕೆಗಳ ಹಂತಕ್ಕೆ ಇಳಿಸಿರುವುದು, ರಾಜ್ಯಗಳೆಲ್ಲವೂ ಸಮಾನ ಅಂತಸ್ತಿನವೆಂಬುದನ್ನು ಪರಿಗಣಿಸಲು ತೋರಿಸಿರುವ ವಿರೋಧ ಮತ್ತು ಬಂಡವಾಳಶಾಹಿ ಪಥದ ಕೆಟ್ಟತನಗಳು ಇವೆಲ್ಲವೂ ಈ ವಿನಾಶದ ಸವಾಲಿಗೆ ದಾರಿಮಾಡಿವೆ.

ಕೇಂದ್ರಸರ್ಕಾರವು ಪರಿಸ್ಥಿತಿಯ ತೀವ್ರ ಸ್ವರೂಪವನ್ನು ಅರಿತಿದ್ದರೂ ಶೀಘ್ರವಾಗಿ ಕ್ರಿಯೆನಡೆಸಿ ಅಲ್ಪಸಂಖ್ಯಾತರನ್ನು ಮತ್ತಷ್ಟು ಹಲ್ಲೆಗಳಿಂದ ರಕ್ಷಿಸಲು ಅಸಮರ್ಥವಾಗಿದೆ.

ಅಲ್ಪಸಂಖ್ಯಾತರ ಬಗ್ಗೆ ತನಗಿರುವ ಕಾಳಜಿಯನ್ನು ತೋರಿಸದೆ, ಕೇಂದ್ರ ಸರ್ಕಾರ ಅವರನ್ನು ರಕ್ಷಿಸಲು ವಿಫಲವಾದಿದೆ. ಏಕೆಂದರೆ ಅಲ್ಪಸಂಖ್ಯಾತರನ್ನು ಹೊರದೂಡಲು ಬದ್ಧವಾಗಿರುವ ಸ್ಥಳೀಯ ಆಡಳಿತದ ಮೇಲೆಯೇ ಅದು ಇನ್ನೂ ಅವಲಂಬಿತವಾಗಿದೆ.

ಸಾರ್ವಜನಿಕ ಗಲಭೆಗಳ ಮಸೂದೆ, ಕೇಂದ್ರ ಮೀಸಲು ಪಡೆಯ ರವಾನೆ, ಸೈನ್ಯ ಘಟಕಗಳ ಧ್ವಜ ಪ್ರದರ್ಶನ ಮುಂತಾದ ಕ್ರಮಗಳನ್ನು ಅದು ಘೋಷಿಸಿದ್ದರೂ ಇವ್ಯಾವುವೂ ಅಲ್ಪಸಂಖ್ಯಾತರನ್ನು ರಕ್ಷಿಸಿಲ್ಲ ಮತ್ತು ಅಸ್ಸಾಮಿ ಜನತೆಯಲ್ಲಿ ರಾಷ್ಟ್ರೀಯ ಐಕ್ಯತೆಯ ಭಾವನೆಯನ್ನು ಹುಟ್ಟಿಸಿಲ್ಲ.

ಕೇಂದ್ರ ಮೀಸಲು ಪಡೆ ಮತ್ತು ಸೈನ್ಯ ಘಟಕಗಳು ಸ್ಥಳೀಯ ಅಧಿಕಾರಿಗಳ ಆದೇಶದಂತೆ ನಡೆದುಕೊಳ್ಳಬೇಕು. ಸ್ಥಳೀಯ ಆಡಳಿತದ ಉನ್ನತ ಅಧಿಕಾರಿಗಳು, ಕೇಂದ್ರ ಪಡೆಗಳು ಅಲ್ಪಸಂಖ್ಯಾತರನ್ನು ರಕ್ಷಿಸುವುದಕ್ಕೆ ಬಿಡುವುದಿಲ್ಲ. ಅವರಲ್ಲಿ ಅನೇಕರು ಚಳುವಳಿಯನ್ನು ಉಗ್ರವಾಗಿ ಬೆಂಬಲಿಸುತ್ತಾರೆ.

ಭಾರತೀಯ ಪೌರತ್ವವನ್ನು ಏನೇ ಆದರೂ ರಕ್ಷಿಸಬೇಕು ಮತ್ತು ಕೇಂದ್ರದ ಅಧಿಕಾರವನ್ನು ಪೂರ್ಣವಾಗಿ ಪ್ರಯೋಗಿಸಿ ಭಾಷಾ ಮತ್ತು ಧಾರ್ಮಿಕ ಅಲ್ಪಸಂಖ್ಯಾತರಿಗೆ ರಕ್ಷಣೆಯನ್ನು ಕೊಡಬೇಕು ಎಂದು ಸಿ.ಪಿ.ಎಂ ದೃಢವಾಗಿ ಒತ್ತಾಯಿಸುತ್ತದಲ್ಲದೆ, ವಿದೇಶಿ ರಾಷ್ಟ್ರೀಯರ ಪ್ರಶ್ನೆಗೆ ಒಂದು ರಾಜಕೀಯ ಪರಿಹಾರವನ್ನೂ ಕಂಡುಹಿಡಿಯಬೇಕೆಂದು ಹೇಳುತ್ತದೆ

ಅನೈಕ್ಯತೆಯ ಅಪಾಯದ ಬಗ್ಗೆ ಜನತೆಯನ್ನು ಎಚ್ಚರಿಸದೆ, ಚಳುವಳಿಯನ್ನು ಬೆಂಬಲಿಸುತ್ತಿರುವ ಅನೇಕ ರಾಜಕೀಯ ಪಕ್ಷಗಳ ಮನೋಭಾವವನ್ನು ಸಿ.ಪಿ.ಎಂ. ಖಂಡಿಸುತ್ತದೆ. ಭಾಷಾ ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ಹಲ್ಲೆಗಳನ್ನು ಅವರು ನಿರ್ಭಾವದಿಂದ ನೋಡುತ್ತಿದ್ದಾರೆ ದೇಶವನ್ನು ಸೀಳಲು ಉದ್ದೇಶಿಸಿರುವ ಸಾಮ್ರಾಜ್ಯಶಾಹಿ ಶಕ್ತಿಗಳ ಕೈಗೊಂಬೆಯಾಗದಿರಲು ಈ ಪಕ್ಷಗಳಿಗೆ ಸಿ.ಪಿ.ಎಂ. ಕರೆನೀಡುತ್ತದೆ.

ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರು, ಹಿಂದುಗಳು, ಮುಸ್ಲಿಮರು, ಬಂಗಾಳಿಗಳು, ಬಿಹಾರಿಗಳು, ನೇಪಾಳಿಗಳು ಮತ್ತು ರಾಜಾಸ್ತಾನಿಗಳು ಮುಂತಾದ ಅಸ್ಸಾಂ ಅಲ್ಪಸಂಖ್ಯಾತರಲ್ಲಿ ಜಾಗೃತಿ ಉಂಟಾಗಿರುವುದನ್ನು ನಮ್ಮ ಪಕ್ಷ ಸ್ವಾಗತಿಸುತ್ತದೆ. ತಮ್ಮ ಭಾರತೀಯ ಪೌರತ್ವ ಮತ್ತು ಮೂಲಭೂತ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಅವರು ಮುಂದಾಗಿದ್ದಾರೆ. ರಾಷ್ಟ್ರೀಯ ಐಕ್ಯತೆಗಾಗಿ ಹೂಡಿದ ಈ ಹೋರಾಟವನ್ನು ಬೂರ್ಜ್ವಾ ಪತ್ರಿಕೆಗಳು ಮತೀಯ ಚಳುವಳಿ ಎಂದು ವರ್ಣಿಸುತ್ತಿದ್ದಾರೆ ಪತ್ರಿಕೆಗಳು ಹರಡುತ್ತಿರುವ ಪ್ರತ್ಯೇಕತಾವಾದಕ್ಕೆ ಇದು ಉದಾಹರಣೆಯಾಗಿದೆ.

ಅಲ್ಪಸಂಖ್ಯಾತರಲ್ಲಿ ಪ್ರಮುಖರಾದ ಬಯಲುಸೀಮೆ ಬುಡಕಟ್ಟಿನವರಲ್ಲೂ ಹೊಸ ಜಾಗೃತಿ ಉಂಟಾಗಿದೆ ಶಿಕ್ಷಣ ಮತ್ತು ಆಡಳಿತದಲ್ಲಿ ಈ ಅಲ್ಪಸಂಖ್ಯಾತವರ್ಗಕ್ಕೆ ಸಾಕಷ್ಟು ಪ್ರಾತಿನಿಧ್ಯ ವರ್ಗಗಳಿಂದ ಪಾಲು ಕೊಡಲಾಗುತ್ತಿಲ್ಲ. ಅವರ ಹಕ್ಕುಗಳನ್ನು ಮತ್ತಷ್ಟು ಮೊಟಕುಗೊಳಿಸಲಾಗುತ್ತದೆಂದು ಈಗ ಬೆದರಿಕೆ ಹಾಕಲಾದಿದೆ.

ರಾಷ್ಟ್ರವಿರೋಧಿ ಚಳುವಳಿಯನ್ನು ಉಗ್ರವಾಗಿ ಪ್ರತಿಭಟಿಸುತ್ತಿರುವ ಪಕ್ಷದ ಕಾಮ್ರೇಡುಗಳಿಗೆ ಪೊಲಿಟ್‌ಬ್ಯೂರೋ ಅಭಿನಂದನೆ ಸಲ್ಲಿಸುತ್ತದೆ. ಕೊಲೆಪಾತಕ ಹಲ್ಲೆಗಳು, ಹೊಡೆತಗಳು, ಸಾರ್ವಜನಿಕ ತಿರಸ್ಕಾರವನ್ನು ಅವರು ಎದುರಿಸಿದ್ದಾರೆ. ಅವರು ಮತ್ತು ಸಿ.ಐ.ಟಿ.ಯು. ನಾಯಕರು, ಎಸ್.ಎಫ್.ಐ., ಕಿಸಾನ್ ಸಂಘಟನೆಗಳ ನಾಯಕರು, ದೇಶದ ಎಲ್ಲ ಪ್ರಜಾಸತ್ತಾತ್ಮಕ ಶಕ್ತಿಗಳ ಅಭಿನಂದನೆಗೆ ಪಾತ್ರರಾಗಿದ್ದಾರೆ. ನಮ್ಮ ಪಕ್ಷದೊಡನೆ ರಾಷ್ಟ್ರೀಯ ಐಕ್ಯತೆಗೆ ಹೋರಾಡುತ್ತಿರುವ ಎಲ್ಲ ವಾಮಪಕ್ಷಗಳು ಗುಂಪುಗಳು ಮತ್ತು ವ್ಯಕ್ತಿಗಳಿಗೆ ಸಿ.ಪಿ.ಎಂ. ತನ್ನ ಸೌಹಾರ್ದ ಅಭಿನಂದನೆ ಸಲ್ಲಿಸುತ್ತದೆ.

ಈ ಕೆಳಕಂಡ ತಳಹದಿಯ ಆಧಾರದ ಮೇಲೆ ಸಮಸ್ಯೆಗೆ ಪರಿಹಾರ ಒದಗಿಸುವ ಮತ್ತು ಅನೈಕ್ಯತಾಶಕ್ತಿಗಳನ್ನು ವಿರೋಧಿಸುವ ಕೆಲಸಗಳಿಗೆ ಬೆಂಬಲ ನೀಡಬೇಕೆಂದು ಎಲ್ಲ ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಸಿ.ಪಿ.ಎಂ. ಕರೆನೀಡುತ್ತದೆ:

1. ಪ್ರತ್ಯೇಕತಾವಾದಿ ಚಳುವಳಿಯನ್ನು ಕೂಡಲೇ ಹಿಂತೆಗೆದುಕೊಳ್ಳಬೇಕು ಮತ್ತು ಅದನ್ನು ಅನುಸರಿಸಿ ದಮನಕಾರಿ ಆಡಳಿತ ಕ್ರಮಗಳೂ ನಿಲ್ಲಬೇಕು 2. ಸ್ಥಳೀಯ ಆಡಳಿತವನ್ನು ಬದಲಾಯಿಸಿ, ಅಲ್ಪಸಂಖ್ಯಾತರಲ್ಲಿ ಭರವಸೆ ಹುಟ್ಟಿಸುವ ಕ್ರಮ ಕೈಗೊಳ್ಳಬೇಕು 3. ಗಡಿಯುದ್ದಕ್ಕೂ ಮತ್ತಷ್ಟು ವಿದೇಶಿಯರ ಪ್ರವೇಶವನ್ನು ನಿಲ್ಲಿಸುವ ದೃಢಕ್ರಮಗಳನ್ನು ಕೇಂದ್ರವು ಘೋಷಿಸಬೇಕು. 4. ಸೂಚಿ ವರ್ಷವಾದಿ 1971 ಅನ್ನು ಇಡುವ ಚರ್ಚೆ ಆರಂಭವಾಗಬೇಕು. 5. ವಿದೇಶಿಯರನ್ನು ಗುರುತಿಸಲು, ಅಲ್ಪಸಂಖ್ಯಾತರಲ್ಲಿ ಭರವಸೆ ಹುಟ್ಟಿಸುವ, ನಿಷ್ಪಕ್ಷಪಾತ ಆಡಳಿತ ಇರಬೇಕು. 6. ರಾಷ್ಟ್ರೀಯ ಐಕ್ಯತೆಯನ್ನು ರಕ್ಷಿಸಲು, ಅಸ್ಸಾಂನ ಜನತೆಗೆ ವಿವರಣೆ ನೀಡಲು ಎಲ್ಲ ಪ್ರಜಾಸತ್ತಾತ್ಮಕ ಪಕ್ಷಗಳು ಜಂಟಿಪ್ರಚಾರ ನಡೆಸಬೇಕು. 7. ನಿರುದ್ಯೋಗ, ಜಮೀನು ಇಲ್ಲದಿರುವುದು ಮತ್ತು ಬಡತನಗಳನ್ನು ನಿವಾರಿಸಲು ಅಸ್ಸಾಂನ ಆರ್ಥಿಕ ಬೆಳವಣಿಗೆಗೆ ಒಪ್ಪಿತ ಕಾರ್ಯಕ್ರಮ ರೂಪಿಸಬೇಕು.

●

ತಿದ್ದುಪಡಿ

ಹಿಂದಿನ ಐಕ್ಯರಂಗ ಸಂಚಿಕೆಯಲ್ಲಿದ್ದ ಮುದ್ರಣಕಾರ್ಮಿಕರ ಸಂಘದ ಸಭೆ ವರದಿಯಲ್ಲಿ ಸಂಘದ ಹೆಸರನ್ನು ಸೌತ್ ಕೆನರಾ ಪ್ರೆಸ್‌ವರ್ಕರ್ಸ್ ಯೂನಿಯನ್ ಎಂದು ಓದಿಕೊಳ್ಳಬೇಕಾಗಿ ಕೋರಿಕೆ.

ಮೈಕೋ ಕಾರ್ಮಿಕರ ಸರ್ವ ಸದಸ್ಯರ ಸಭೆಯ ತೀರ್ಮಾನ

ಮೈಕೋ ಕಾರ್ಖಾನೆಯ ಕಾರ್ಮಿಕರ ಸರ್ವಸದಸ್ಯರ ಸಭೆಯು ಸೇರಿ ಈ ಕೆಳಕಂಡ ತೀರ್ಮಾನವನ್ನು ಸರ್ವಾನುಮತದಿಂದ ತೆಗೆದುಕೊಂಡಿದೆ.

ನ್ಯಾಯಯುತ ದೀರ್ಘ ಹೋರಾಟದಲ್ಲಿ ನಿರತರಾಗಿರುವ ಐ.ಟಿ.ಸಿ (ಇಂಡಿಯನ್ ಟೊಬ್ಯಾಕೋ ಕಂಪನಿ) ಯ ಸಾವಿರ ಕಾರ್ಮಿಕರಿಗೆ ಮೈಕೋ ಕಾರ್ಮಿಕರು, ತಲಾ ಐದು ಕೆ.ಜಿ. ಅಕ್ಕಿ, ರಾಗಿ, ಗೋದಿ ಹೀಗೆ ದಿನಸಿ ಧಾನ್ಯಗಳನ್ನು ಕೊಡಲು ತೀರ್ಮಾನಿಸಿದ್ದಾರೆ.

ಮೈಕೋ ಆಡಳಿತ ವರ್ಗದ ದಬ್ಬಾಳಿಕೆಯನ್ನೆದುರಿಸಿ ಸ.ದೀರ್ಘಕಾಲ ಹೋರಾಡಿ ನೋವು, ಕಷ್ಟ, ನಷ್ಟಕ್ಕೊಳಗಾದ ಈ ಕಾರ್ಮಿಕರು, ಈ ಮೇಲಿನ ತೀರ್ಮಾನವನ್ನು ತೆಗೆದುಕೊಂಡಿರುವುದು ನ್ಯಾಯೋಚಿತ ಹಾಗೂ ಇತರ ಕಾರ್ಮಿಕರ ಹೋರಾಟಗಳಿಗೊಂದು ಮಾರ್ಗದರ್ಶನ.

ನೂರುದಿನಗಳಿಗೂ ಮೇಲ್ಪಟ್ಟು ಹೋರಾಡುತ್ತಿರುವ ಐ.ಟಿ.ಸಿ. ಕಾರ್ಮಿಕರ ಹೋರಾಟವನ್ನು ಮುರಿದಿಕ್ಕಲು ಆಡಳಿತವರ್ಗ ಹಲವು ತಂತ್ರ ಕುತಂತ್ರಗಳನ್ನು ಉಪಯೋಗಿಸುತ್ತಿದೆ.

ಈ ಕಾರ್ಮಿಕರ ವಿವಾದ ಹೈಕೋರ್ಟಿನಲ್ಲಿ ನಡೆಯುತ್ತಿದ್ದು ಪ್ರತಿ ಬಾರಿಯೂ ಅದ್ಯಾವುದೋ ಕಾರಣದಿಂದ ಮುಂದೂಡಲ್ಪಡುತ್ತಿದೆ. ನ್ಯಾಯ ಬೇಡಿಕೆಯ ಶಾಂತಿಯುತ ಹೋರಾಟದಲ್ಲಿರುವ ಕಾರ್ಮಿಕರ ವಿರುದ್ಧ ಆಡಳಿತ ವರ್ಗ ಗೂಂಡಾಗಳನ್ನು ಪ್ರಚೋದಿಸಿ, ಹೋರಾಟವನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿರುವುದು ಖಂಡನೀಯ. ಕಾರ್ಖಾನೆಯಲ್ಲಿ ಕಾರ್ಮಿಕರಿಲ್ಲದೆ, ಉತ್ಪಾದನೆ ಸ್ಥಗಿತವಾಗಿದ್ದರೂ, ಕೆಲಸಗಾರರು ಹಾಜರಾಗುತ್ತಿರುವರು ಎಂದು ಬಡಾಯಿ ಕೊಚ್ಚಿಕೊಳ್ಳುತ್ತಿರುವ ಐ.ಟಿ.ಸಿ.ಯ ಆಡಳಿತವರ್ಗಕ್ಕೆ ನಾಚಿಕೆಯಾಗಬೇಕು.

ಐ.ಟಿ.ಸಿ.ಯ ಆಡಳಿತವರ್ಗದ ಧಾಳಿ, ದಬ್ಬಾಳಿಕೆಗಳನ್ನು ಹಿಮ್ಮೆಟ್ಟಿಸಲು, ಅವರಿಗೆ ನ್ಯಾಯ ದೊರಕಿಸಿಕೊಡಲು, ಮೈಕೋ ಕಾರ್ಮಿಕರಂತೆ, ಇತರೆಲ್ಲಾ ಕಾರ್ಮಿಕಸಂಘ ಸಂಸ್ಥೆಗಳು ಸಹಾಯ ನೀಡುವುದೂ, ಹೋರಾಟದಲ್ಲಿ ಸಹಭಾಗಿಯಾಗುವುದೂ ಇಂದಿನ ತುರ್ತಿನ ಅಗತ್ಯವಿದೆ.

○

ಇ. ಎಂ. ಎಸ್. ಗೆ ಯಶಸ್ವಿ ಶಸ್ತ್ರಕ್ರಿಯೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಇ.ಎಂ.ಎಸ್. ನಂಬೂದಿರಿಪಾದ್ ಅವರಿಗೆ ಕರ್ನಾಟಕದ ಮಣಿಪಾಲದ ಆಸ್ಪತ್ರೆಯೊಂದರಲ್ಲಿ ಯಶಸ್ವಿಯಾಗಿ ಶಸ್ತ್ರಕ್ರಿಯೆ ನಡೆಸಲಾಗಿದೆ. ಅವರು ಶೀಘ್ರವಾಗಿ ಗುಣಮುಖವಾಗಲೆಂದು ಮುಖ್ಯಮಂತ್ರಿ ಆರ್. ಗುಂಡೂರಾವ್ ಹಾರೈಸಿದ್ದಾರೆ.

ಸಂಜಯಗಾಂಧಿ ನಿಧನದ ಬಗ್ಗೆ ಇ.ಎಂ.ಎಸ್. ಸಂತಾಪ ವ್ಯಕ್ತಪಡಿಸಿ ಇಂದಿರಾಗೆ ಸಂದೇಶ ಕಳಿಸಿದ್ದಾರೆ.

●

ಸಂಜಯ ದುರ್ಮರಣ

ಅತ್ಯಲ್ಪ ಕಾಲದಲ್ಲಿ ರಾಜಕೀಯ ರಂಗದಲ್ಲಿ ಬಹಳಷ್ಟು ಮೇಲಕ್ಕೇರಿದ, ಅತಿಯಾದ ವಾದವಿವಾದಗಳಿಗೊಳಗಾದ ಮತ್ತು ಬಹಳಷ್ಟು ಟೀಕೆಗೊಳಗಾದಿದ್ದ ಸಂಜಯಗಾಂಧಿ ವಿಮಾನ ಅಪಘಾತದಲ್ಲಿ ದುರ್ಮರಣವನ್ನು ಅಪ್ಪಬೇಕಾಗಿ ಬಂತು ಇದಕ್ಕಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ತನ್ನ ಸಂತಾಪವನ್ನು ಸೂಚಿಸಿದೆ.

●

ಮಾಜಿ ರಾಷ್ಟ್ರಾಧ್ಯಕ್ಷರ ನಿಧನಕ್ಕೆ ಸಂತಾಪ

ಭಾರತದೇಶದ ಮಾಜಿ ರಾಷ್ಟ್ರಾಧ್ಯಕ್ಷ, ಹಿರಿಯರಾಜಕಾರಣಿ ವಿ.ವಿ. ಗಿರಿಯವರು ಸಾವನ್ನಪ್ಪಿದ್ದಾರೆ. ರಾಷ್ಟ್ರದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ಇವರು, ಕಾರ್ಮಿಕ ಚಳವಳಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು. ರಾಷ್ಟ್ರದ ರಾಜಕೀಯದಲ್ಲಿ ತಮ್ಮದೇ ಆದ ಪಾತ್ರವನ್ನು ವಹಿಸಿದ್ದ ಈ ಹಿರಿಯ ರಾಜಕಾರಿಣಿಯ ಸಾವಿಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿಯು ತನ್ನ ಸಂತಾಪವನ್ನು ಸೂಚಿಸುತ್ತದೆ. ●

ಗ್ರಾಮಯುವಕ ಮಂಡಲದ ವಾರ್ಷಿಕಸಭೆ

ದ. ಕನ್ನಡ ಜಿಲ್ಲೆಯ ಮಂಗಳೂರಿನ ಜಪ್ಪಿನಮೊಗ್ರು ಗ್ರಾಮದ ಯುವಕ ಮಂಡಲದ ವಾರ್ಷಿಕ ಸಭೆಯು 8-6-80ರಂದು ಸೇರಿತ್ತು. ಪಂಚಾಯಿತಿ ಅಧ್ಯಕ್ಷ ಜೆ. ಸದಾಶಿವಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಯುವಕ ಮಂಡಲದ ಕಾರ್ಯದರ್ಶಿ ಜೆ. ಚಂದ್ರಹಾಸ ಅವರು ಮಂಡಲದ ಕಾರ್ಯಚಟುವಟಿಕೆಗಳ ವರದಿಯನ್ನು ಸಭೆಯ ಮುಂದಿಟ್ಟರು. ಖಜಾಂಚಿ ಜೆ. ಬಾಲಕೃಷ್ಣಶೆಟ್ಟಿ ಲೆಕ್ಕಪತ್ರ ಒಪ್ಪಿಸಿದರು. ನಂತರ ಹದಿಮೂರು ಸದಸ್ಯರ ಸಮಿತಿಯನ್ನು ಚುನಾಯಿಸಲಾಯಿತು. ○

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT